

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SK NEWS ಕನ್ನಡ

SIHI KAHI
KANNADA DAILY MORNING
BAGALKOT

Volume : 06 | Issue : 243 | Tuesday 04-06-2024 | E-mail : maruti.b.hosamani76@gmail.com | Page: 4 | Price : Rs. 1/-


## ನೆಟೆರೋಗ ನಿರೋಧಕ ಹಾಗೂ ಅಧಿಕ ಇಳುವರಿ ತಳಿಗಳನ್ನು ಬಳಸಿ: ಸೋಮನಗೌಡ ಬಿರಾದಾರ




**ದೇವರ ಹಿಪ್ಪರಗಿ :** 03–06–2023 ರಂದು ಕೃಷಿ ಇಲಾಖೆ ವತಿಯಿಂದ ರೈತ ಸಂಪರ್ಕ ಕೇಂದ್ರ ದೇವರ ಹಿಪ್ಪರಗಿ ಯಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆಗೆ ಚಾಲನೆ ನೀಡಲಾಯಿತು. ಕೃಷಿ ಅಧಿಕಾರಿ ಹೆಚ್ ಕೆ ಪಾಟೀಲ ಮಾತನಾಡಿ ಸರ್ಕಾರದ ಆದೇಶದಂತೆ ಈ ಬಾರಿ ಬೀಜ ವಿತರಣೆಯನ್ನು ಕ್ಯೂ ಆರ್ ಕೋಡ್ ಮೂಲಕ ವಿತರಿಸಲಾಗುತ್ತಿದ್ದು . ರೈತರು ಗರಿಷ್ಠ 5 ಎಕರೆವರೆಗೆ ಸಹಾಯದನದಲ್ಲಿ ಬಿತ್ತನೆ ಬೀಜಗಳನ್ನು ಪಡೆದು ಕೊಳ್ಳಬಹುದು ಎಂದರು. ಕೃಷಿ ಅಧಿಕಾರಿ ಸೋಮನಗೌಡ ಬಿರಾದಾರ ರೈತ ಸಂಪರ್ಕ ಕೇಂದ್ರದಲ್ಲಿ ಈಗಾಗಲೇ 82 ಕ್ವಿಂಟಾಲ್ ತೊಗರಿ, 3 ಕ್ವಿಂಟಾಲ್ ಹೆಸರು, 20 ಕ್ವಿಂಟಾಲ್ ಮೆಕ್ಕೆಜೋಳ, 3 ಕ್ವಿಂಟಾಲ್ ಸಜ್ಜೆ, 2 ಕ್ವಿಂಟಾಲ್ ಸೂರ್ಯಕಾಂತಿಯನ್ನು ದಾಸ್ತಾನು ಕರಿಸಲಾಗಿದೆ. ಮುಖ್ಯವಾಗಿ ತೊಗರಿಯಲ್ಲಿ ನೀರಾವರಿ ಹಾಗೂ ಹೆಚ್ಚು ತೇವಾಂಶ ಹಿಡಿದಿಟ್ಟು ಕೊಳ್ಳುವ ಜಮೀನುಗಳಿಗೆ ಹೊಸದಾಗಿ ಅಭಿವೃದ್ಧಿ ಪಡಿಸಿದ ನೆಟೆರೋಗ ನಿರೋಧಕ ತಳಿಗಳಾದ ಜಿ ಆರ್ ಜಿ –152, ಜಿ ಆರ್ ಜಿ 811 ಗಳನ್ನು ರೈತರು ಬಳಸಬೇಕು ಮತ್ತು ಬಿತ್ತನೆ ಬೀಜಗಳನ್ನು ಪಡೆಯಲು ಕಡ್ಡಾಯವಾಗಿ ಎಫ್.ಐ.ಡಿ, ಮತ್ತು ಜಾತಿ ಪ್ರಮಾಣ ಪತ್ರ ದಾಖಲಾತಿಗಳನ್ನು ಸಲ್ಲಿಸಿ ಸಹಾಯದನದಲ್ಲಿ ಪ್ರಮಾಣಿಕೃತ ಬಿತ್ತನೆ ಬೀಜಗಳನ್ನು ಪಡೆಯಬೇಕು ಎಂದು ತಿಳಿಸಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ ಹಚ್ಯಾಳ ದೇವರ ಹಿಪ್ಪರಗಿ.**

## ವರುಣನ ಕೃಪೆಯಿಂದ ರೈತರಿಗೆ ಸಖತ್ ಖುಷಿ ಮುಂಗಾರು ಬಿತ್ತನೆಗೆ ಚುರುಕು ಮೂಡಿಸಿದ ರೋಹಿಣಿ





**ಹುನಗುಂದ :** ತಾಲೂಕಿನಾದ್ಯಂತ ರವಿವಾರ ರಾತ್ರಿಯಿಡೀ ಬಾರಿ ಪ್ರಮಾಣದ ಗುಡುಗು, ಸಿಡಿಲು, ಗಾಳಿ ಸಹಿತ ಸುರಿದ ಧಾರಾಕಾರ ಮಳೆಗೆ ಹೊಲ ಗದ್ದೆಗಳಲ್ಲಿ ನೀರು ತುಂಬಿ ಕೊಂಡಿದ್ದರೇ ತಾಲೂಕಿನ ಕೆಲವೊಂದು ಕಡೆಗಳ ಪ್ರಮುಖ ಸೇತುವೆಗಳು ಮಳೆಯ ನೀರಿನಿಂದ ಜಲಾವೃತ ಗೊಂಡಿವೆ.

ಹೌದು ಮುಂಗಾರು ಹಂಗಾಮಿನ ಪೂರ್ವದಲ್ಲಿ ತಾಲೂಕಿನಾದ್ಯಂತ ವರಣನ ಕೃಪೆ ತೋರಿ ಒಂದು ವಾರದಿಂದ ಮಳೆಯು ಮಾಯವಾಗಿತ್ತು. ಮುಂಗಾರು ಬಿತ್ತನೆಗೆ ಸಕಲ ಸಿದ್ದತೆ ಮಾ ಡಿಕೊಂಡಿದ್ದ ರೈತರು ಮಳೆ ಮಾಯವಾಗಿ ಒಣ ಹವೆ ಮತ್ತು ಬಿಸಿಗಾಳಿ ಬಿಸಲು ತೊಡಗಿದ್ದ–ರಿಂದ ಈ ಬಾರಿ ಮತ್ತೇ ಮುಂಗಾರು ಕೈಕೊಡತ್ತಾ ಎನ್ನುವ ಆಂತಕದಲ್ಲಿದ್ದ ರೈತರಿಗೆ ರವಿವಾರ ಬೆಳಿಗ್ಗೆ ರಾಜ್ಯದಲ್ಲಿ ಮೂರ್ನಾಲ್ಕು ದಿನಗಳ ಕಾಲ ಬಾರಿ ಮಳೆಯಾಗಲಿದೆ ಎನ್ನುವ ಮಾಹಿತಿ ಹವಮಾನ ಇಲಾಖೆಯಿಂದ ಹೊರ ಬೀಳುವ ಬೆನ್ನಲ್ಲೆ ರವಿವಾರ ರಾತ್ರಿ ಏಕಾ ಏಕಿಯಾಗಿ ರೋಹಿಣಿ ಮಳೆಯು ಬಾರಿ ಪ್ರಮಾಣದಲ್ಲಿ ಸುರಿದ ಮಳೆಯಿಂದ ಮೂರು ತಿಂಗಳಿನಿಂದ ಬೇಸಿಗೆಯ ಭಯಂಕರ ಬಿಸಿಲಿಗೆ ಬಸವಳಿದ ಜನರಿಗೆ ಸಧ್ಯ ತಂಪಾದ ವಾತಾವರಣ ನಿರ್ಮಾಣವಾಗಿದೆ.

ಮುಂಗಾರು ಹಂಗಾಮಿನಲ್ಲಿ ವಾಡಿಕೆಯಂತೆ ಹುನಗುಂದ ತಾಲೂಕಿನಲ್ಲಿ 113 ಎಂ.ಎಂ. ಮಳೆಯಾಗಬೇಕಿತ್ತು ಆದರೆ ಅದನ್ನು ಮೀರಿ 153 ಎಂ.ಎಂ. ಮಳೆಯಾಗಿದೆ.ಇನ್ನೂ ಇಳಕಲ್ಲ ತಾಲೂಕಿನಲ್ಲಿ ವಾಡಿಕೆಯಂತೆ 117 ಎಂ.ಎಂ. ಮಳೆಯಾಗ ಬೇಕಿತ್ತು ಆದ–ರೆ 173 ಎಂ.ಎಂ. ಮಳೆಯಾಗಿದೆ. ಇನ್ನೂ ರವಿವಾರ ರಾತ್ರಿ ಸುರಿದ ಬಾರಿ ಮಳೆಯು ಹುನಗುಂದದಲ್ಲಿ 62.3 ಎಂ.ಎಂ ಮತ್ತು ಇಳಕಲ್ಲದಲ್ಲಿ 59.3 ಎಂ.ಎಂ ಅಮೀನಗಡದಲ್ಲಿ 18 ಎಂ.ಎಂ ಮಳೆಯಾಗಿದೆ ಎಂದು ಕೃಷಿ ಇಲಾಖೆಯ ಮೂಲದಿಂದ ತಿಳಿದು ಬಂದಿದೆ.

ಗುಡುಗು ಸಿಡಿಲು ಗಾಳಿಯಿಂದ ಆರಂಭಗೊಂಡ ಮಳೆಯು ರಾತ್ರಿಯಿಡೀ ವರಣನ ಆರ್ಭಟಕ್ಕೆ ಮಳೆಯ ನೀರು ಹೊಲ ಗದ್ದೆಗಳಲ್ಲಿ ನುಗ್ಗಿ ಕೆಲವೊಂದು ಹೊಲದ ಒಡ್ಡುಗಳು ಕೊಚ್ಚಿ ಹೋಗಿದ್ದರೇ ಕೆಲವೊಂದು ಕಡೆಗೆ ಹಳ್ಳ, ಕೆರೆಗಳ ಬದಿಯಲ್ಲಿ ಹೊಲಗಳ ಒತ್ತುವರಿಯಿಂದ ಮಳೆಯ ನೀರು ಕೆಲವೊಂದು ಹೊಲಗಳಲ್ಲಿ ಕೆರೆಯಂತೆ ಮಳೆಯ ನೀರು ತುಂಬಿ ಕೊಂಡಿದೆ. ಭಾರಿ ಮಳೆಯಿಂದ ಬೆಳಗಲ್ಲ ಇದ್ದಲಗಿ ಮಾರ್ಗವಾಗಿ ಧನ್ನೂರ ಸಂಪರ್ಕಿಸುವ ರಸ್ತೆಯಲ್ಲಿರುವ ಕಮದತ್ತ ಸೇತುವೆ, ಹುನಗುಂದಕ್ಕೆ ಸಂಪರ್ಕಿಸುವ ಬೇಕಮಲದಿನ್ನಿ ಸೇತುವೆ, ಕರಡಿಯಿಂದ ಹುನಗುಂದ ಮತ್ತು ಇಳಕಲ್ಲ ಸಂಪರ್ಕಿಸುವ ಸೇತುವೆ ಮಳೆಯ ನೀರಿನಿಂದ ಜಲಾವೃತ ಗೊಂಡು ಕೆಲ ಹೊತ್ತು ದ್ವಿಚಕ್ರ, ಬಸ್, ಬಾರಿ ವಾಹನಗಳ ಸವಾರರು ಪರದಾಡುವ ಪರಸ್ಥಿತಿ ನಿರ್ಮಾಣವಾಗಿತ್ತು.

ಇನ್ನೂ ಹುನಗುಂದ ಪಟ್ಟಣದಲ್ಲಿ ಗದ್ದಿ ಆಲ್ ಮಿಲ್ ಮತ್ತು ಆರ್. ಎಂಎಸ್ಎ ಶಾಲೆಯ ಕಡೆಗೆ ಎರಡು ಮೂರು ಕಡೆಗಲ್ಲಿ ವಿದ್ಯುತ್ ಟಿಸಿ ಸುಟ್ಟಿದ್ದು.ಹುನಗುಂದ ಎಪಿಎಂಸಿಯಲ್ಲಿ ಮರವೊಂದು ಧರೆಗುರುಳಿದೆ.


ಒಟ್ಟಾರೆಯಾಗಿ ರವಿವಾರ ಮಳೆರಾಯನ ರೌದ್ರಾವತಾರಕ್ಕೆ ಕೆಲವೊಂದು ಆವಾಂತರಗಳನ್ನು ಸೃಷ್ಟಿಸಿದ್ದರೂ ಕೂಡಾ ಮುಂಗಾರು ಪೂರ್ವದಲ್ಲಿ ಮಳೆಯನ್ನು ನೆಚ್ಚಿಕೊಂಡು ಬಿತ್ತನೆ ಮಾಡಿ ಒಂದು ವಾರದಿಂದ ಮಳೆಯಿಲ್ಲದೇ ಮತ್ತೇ ಮುಂಗಾರು ಕೈ ಕೊಟ್ಟಿತ್ತು ಎಂದು ಆತಂಕದಲ್ಲಿದ್ದ ರೈತರಿಗೆ ರವಿವಾರದ ಮಳೆಯು ಖುಷಿ ತಂದಿದೆ.

**ಹಳ್ಳದ ಅಕ್ಕಪಕ್ಕದ ಜಮೀನನ ಮಾಲಿಕರು ಹಳ್ಳನ್ನು ಒತ್ತುವರಿ ಮಾಡಿದ್ದರಿಂದ ಮಳೆಯ ನೀರು ಸರಾಗವಾಗಿ ಹಳ್ಳದ ಮೂಲಕ ಹೋಗದೇ ಅಕ್ಕಪಕ್ಕದ ಹೊಲಗಳಿಗೆ ನುಗ್ಗಿ ರೈತರಿಗೆ ತೊಂದ–ರೆ ಯಾಗಿದ್ದು. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ತಕ್ಷಣವೇ ಎಚ್ಚೆತ್ತು ಕೊಂಡು ಹಳ್ಳಗಳನ್ನು ಸರ್ವೆ ಮಾಡಿ ಒತ್ತುವರಿಯನ್ನು ತೆರುವು ಗೊಳಿಸಬೇಕು.**

**। ಹನಮಂತ ಸಂದಿಮನಿ ಹುನಗುಂದ ರೈತ.**

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ ಹುನಗುಂದ**

## ಡಿಟಿ ಶ್ರೀನಿವಾಸ್ ಪರ ಆಗ್ನೇಯ ವಿಧಾನ ಪರಿಷತ್ ಚುನಾವಣೆ ಎಲ್ಲರೂ ಕೈ ಜೋಡಿಸಿ ಎಂದ ಶಾಸಕರು








**ಚಿತ್ರದುರ್ಗ :** ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಡಿ.ಟಿ ಶ್ರೀನಿವಾಸ್ ಅವರ ಗೆಲುವು ನಿಶ್ಚಿತವಾಗಿದೆ. ಶಿಕ್ಷಕರ ನಡುವೆ ನಿರಂತರ ಒಡನಾಟವಿಟ್ಟುಕೊಂಡು ಅವರ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರಗಳೇನು ಎಂಬುದನ್ನು ಅರಿತಿರುವ ಡಿ.ಟಿ ಶ್ರೀನಿವಾಸ್ ಅವರನ್ನು ಬೆಂಬಲಿಸಿ ಮತ ನೀಡಿ.

ಕೈ ಜೋಡಿಸಿ ಜೀವನ ಬದಲಿಸಿ ಮತ್ತು ಇಂದು ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದ ಗಣಪತಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ದುರ್ಗಮ್ಮ ಬಾಬು ಅವರು ಅವಿರೋಧವಾಗಿ ಆಯ್ಕೆ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಎನ್ ವೈ ಗೋಪಾಲ ಕೃಷ್ಣರವರು ಅಭಿನಂದನೆ ಸಲ್ಲಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ತಿಪ್ಪೇಸ್ವಾಮಿ ಹೊಂಬಾಳೆ ಮೊಳಕಾಲ್ಮುರು**

## ಭವ್ಯ ನರಸಿಂಹಮೂರ್ತಿ. ರಾಜಕಾರಣಿ, ಕಾರ್ಯಕರ್ತೆ ಮತ್ತು ಈಗ ಸೇನಾಧಿಕಾರಿಯಾಗಿ ನೇಮಕ



ಎಐಸಿಸಿ ರಾಷ್ಟ್ರೀಯ ಸಂಯೋಜಕಿ ಹಾಗೂ ಕರ್ನಾಟಕ ಕಾಂಗ್ರೆಸ್ ವಕ್ತಾರ ಭವ್ಯಾ ನರಸಿಂಹಮೂರ್ತಿ ಇತ್ತೀಚೆಗಷ್ಟೇ ಸೇನಾಧಿಕಾರಿಯಾಗಿ ಹೊಸ ಪಯಣ ಆರಂಭಿಸಿದ್ದಾರೆ. ಭವ್ಯಾ ನರಸಿಂಹಮೂರ್ತಿ ಇತ್ತೀಚೆಗೆ ಪ್ರಾದೇಶಿಕ ಸೇನೆಗೆ ಕಮಿಷನ್ಡ್ ಆಫೀಸರ್ ಆಗಿ ಸೇರ್ಪಡೆ ಗೊಂಡಿದ್ದಾರೆ. ಅವರು ತಮ್ಮದೇಶಕ್ಕೆಸೇವೆಸಲ್ಲಿಸಲುಹೆಚ್ಚಿನ ಸಮರ್ಪಣೆ ಮತ್ತು ಬದ್ಧತೆಯನ್ನು ತೋರಿಸಿದ್ದಾರೆ, ಅದಕ್ಕಾಗಿಯೇ ಅವರು ಈ ಪ್ರತಿಷ್ಠಿತ ಸ್ಥಾನವನ್ನು ಹೊಂದಿದ್ದಾರೆ. ಭವ್ಯಾ ಅವರು ನಿಯೋಜಿತ ಅಧಿಕಾರಿಯಾಗಿ, ಪ್ರದೇಶದ ಸುರಕ್ಷತೆ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳಲು ಸೈನ್ಯವನ್ನು ಮುನ್ನಡೆಸುವ ಮತ್ತು ನಿರ್ವಹಿಸುವ ಪ್ರಮುಖ ಜವಾಬ್ದಾರಿಯನ್ನು ಹೊಂದಿದ್ದಾರೆ.

ಭವ್ಯ ನರಸಿಂಹಮೂರ್ತಿ ಅವರು ಯಾರು.....?

ಭವ್ಯ ನರಸಿಂಹಮೂರ್ತಿ ಅವರು ಕರ್ನಾಟಕದ ಚಿಕ್ಕಮಗಳೂರಿನವರು. ಅವರು ಕೃಷಿ ಕುಟುಂಬ ದಿಂದ ಬಂದವರು ಮತ್ತು ಅವರ ತಂದೆ ಮಾಜಿ ಸೈನಿಕರು. ಅವರು ತಮ್ಮ ಶಿಕ್ಷಣವನ್ನು ಚಿಕ್ಕಮಗಳೂರಿನಲ್ಲಿ ಪೂರ್ಣ ಗೊಳಿಸಿದರು ಮತ್ತು ಬೆಂಗಳೂರಿನಲ್ಲಿ ಎಂಜಿನಿಯ ರಿಂಗ್ ಪದವಿ ಪಡೆದರು. ಭವ್ಯ ನರಸಿಂಹಮೂರ್ತಿ ಒಬ್ಬ ಯುವ ಭಾರತೀಯ ರಾಜಕೀಯ ಮುಖಂಡ ಮತ್ತು ಮಾಜಿ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರು. 2019 ರಲ್ಲಿ ಕಾಂಗ್ರೆಸ್ ಪಕ್ಷದಿಂದ ಚುನಾವಣೆ ಸ್ಪರ್ಧಿಸಲುಅವಕಾಶಸಿಗದಕಾರಣ ಅವರು ಪಕ್ಷ ತೊರೆದು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದರು. 2023ರಲ್ಲಿನಡೆದ ಚುನಾವಣೆಯಲ್ಲಿ ಸೋತ ನಂತರ ಅವರು ಭಾರತೀಯ ಸೇನೆಗೆ ಸೇರಿದರು ಮತ್ತು 2024 ರಲ್ಲಿ ಟೆರಿಟೋರಿಯಲ್ ಆರ್ಮಿಯಲ್ಲಿ ಕಮಿಷನ್ಡ್ ಅಧಿಕಾರಿಯಾಗಿ ನೇಮಕಗೊಂಡರು.

ಅವರು ಮಿಲಿಟರಿ ಕಾರ್ಯಾಚರಣೆಗಳು ಮತ್ತು ಕಾರ್ಯತಂತ್ರದ ಯೋಜನೆಯಲ್ಲಿ ತಮ್ಮ ತರಬೇತಿ ಮತ್ತು ಪರಿಣತಿಯನ್ನು ಹೊಂದಿದ್ದಾರೆ. ಭವ್ಯಾ ಅವರ ನೇಮಕಾತಿಯು ಅವರ ಅತ್ಯುತ್ತಮ ಕೌಶಲ್ಯ ಮತ್ತು ಅರ್ಹತೆಗಳ ಸ್ಪಷ್ಟ ಸೂಚನೆಯಾಗಿದೆ. ಅವರ ಹೊಸ ಸ್ಥಾನದಲ್ಲಿ ಅಭಿವೃದ್ಧಿ ಹೊಂದುವ ಅವರ ಸಾಮರ್ಥ್ಯದ ಬಗ್ಗೆ ನಮಗೆ ಸಂಪೂರ್ಣ ವಿಶ್ವಾಸವಿದೆ. ಭವ್ಯಾ ಅವರ ಅರ್ಹ ಸಾಧನೆಗಾಗಿ ಅಭಿನಂದನೆಗಳು. ಅವರ ಮಿಲಿಟರಿ ವೃತ್ತಿ ಜೀವನದಲ್ಲಿ ನಾವು ಅವರಿಗೆ ಶುಭ ಹಾರೈಸೋಣ. ಭವ್ಯ ನರಸಿಂಹಮೂರ್ತಿ ಇತ್ತೀಚೆಗೆ ತಮ್ಮ ಎಕ್ಸ್ ಖಾತೆಯ ಬಗ್ಗೆ ಕೆಲವು ರೋಚಕ ಸುದ್ದಿಗಳನ್ನು ಹಂಚಿಕೊಂಡಿದ್ದಾರೆ

ಸೇನೆಗೆ ಸೇರ್ಪಡೆ.....

ತರಬೇತಿ ವೇಳೆ ಭಾರತೀಯ ಸೇನೆಯ ಸಮವಸ್ತ್ರ ಧರಿಸಿರುವ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಇದು ನನಗೆ ಅತ್ಯಂತ ಹೆಮ್ಮೆಯ ಕ್ಷಣ ಎಂದು ಅವರು ಹಂಚಿ ಕೊಂಡಿದ್ದಾರೆ. 2022 ರಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ದಕ್ಷಿಣ ಭಾರತದಿಂದ ಆಯ್ಕೆಯಾದ ಏಕೈಕ ಮಹಿಳಾ ಪ್ರಾದೇಶಿಕ ಸೇನಾ ಅಧಿಕಾರಿ ಭವ್ಯಾನರಸಿಂಹಮೂರ್ತಿಅವರು. ಭವ್ಯ ನರಸಿಂಹಮೂರ್ತಿ ಪ್ರಸ್ತುತ ಭಾರತಪಾಕಿಸ್ತಾನದಗಡಿ(ಐಔಅ) ಪ್ರದೇಶದಲ್ಲಿ ಭಾರತೀಯ ಸೇನಾ ಘಟಕದಲ್ಲಿ ನೆಲೆಸಿದ್ದಾರೆ. ದೇಶಕ್ಕೆ ಅರ್ಥಪೂರ್ಣ ಕೊಡುಗೆಯನ್ನು ನೀಡುವಅವಕಾಶವನ್ನುಅನ್ವೇಷಿಸಿ ಪ್ರಾದೇಶಿಕ ಸೇನೆಯು ಭಾರತೀಯ ನಾಗರಿಕರಿಗೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ನೀಡುತ್ತಿದೆ ಮತ್ತು ನಾಗರಿಕ ವೃತ್ತಿ ಜೀವನವನ್ನು ಮುಂದುವರಿಸಲುಅವಕಾಶವನ್ನು ನೀಡುತ್ತದೆ.

ಭಾರತ ತಂಡದ ಮಾಜಿ ಆಟಗಾರ ಎಂಎಸ್ ಧೋನಿ, ರಾಜಸ್ಥಾನದ ಮಾಜಿ ಸಿಎಂ ಸಚಿನ್ ಪೈಲಟ್ ಮತ್ತು ಮಾಜಿ ಕೇಂದ್ರ ಸಚಿವ ಅನುರಾಗ್ ಠಾಕೂರ್ ಸೇರಿದಂತೆ ಹಲವಾರು ಪ್ರಸಿದ್ಧ ವ್ಯಕ್ತಿಗಳು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ನಿರ್ಧಾರವು ಅವರ ದೇಶಕ್ಕೆ ಅವರ ಬಲವಾದ ನಿಷ್ಠೆ ಮತ್ತು ಭಕ್ತಿಯನ್ನು ಪ್ರತಿ ಬಿಂಬಿಸುತ್ತದೆ

**ಲೇಖನ : ಪ್ರತಾಪ್. ವಾಯ್. ಕಿಳ್ಳಿ ಇಲಕಲ್ಲ.**

## ಶಿಸ್ತು ಪಾಲನೆಗೆ ನೀತಿ ಸಂಹಿತೆ ಜಾಗೃತಿ ಅಗತ್ಯ: ಡಾ.ಜಗನ್ನಾಥ ಚವ್ಹಾಣ




**ಬಾಗಲಕೋಟೆ :** ಕಾಲೇಜುಗಳಲ್ಲಿನ ನೀತಿ ಸಂಹಿತೆಗಳು ವಿದ್ಯಾರ್ಥಿಗಳ ಮನೋವಿಕಾಸಕ್ಕೆ ದಾರಿಯಾಗುತ್ತದೆ, ಶಿಸ್ತು ಪಾಲನಗೆ ವಿದ್ಯಾರ್ಥಿಗಳಿಗೆ ನೀತಿ ಸಂಹಿತೆಗಳ ಬಗ್ಗೆ ಅರಿವು ಅಗತ್ಯ ಎಂದು ಪ್ರಾಚಾರ್ಯರಾದ ಡಾ.ಜಗನ್ನಾಥ ವ್ಹಿ.ಚವ್ಹಾಣ ಹೇಳಿದರು.

ಬ.ವಿ.ವಿ ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ ಬಾಗಲಕೋಟೆಯ ವಿದ್ಯಾರ್ಥಿಗಳಕಲ್ಯಾಣ ವಿಭಾಗದಡಿಯಲ್ಲಿ ನೀತಿ ಸಂಹಿತೆ ಕುರಿತು ಜಾಗೃತಿ ಕಾರ್ಯಕ್ರಮ ಕುರಿತು ಮಾತನಾಡಿದರು. ಮಹಾವಿದ್ಯಾಲಯ ದಲ್ಲಿನ ನೀತಿ ಸಂಹಿತೆಗಳ ಅಧ್ಯಯನಗಳು ಅವುಗಳ ಪರಿಣಾಮಕಾರಿ ಅನುಷ್ಠಾನವು ಕಲಿಕೆಯ ಪ್ರಕ್ರಿಯೆಯಾಗಿದೆ. ಅವುಗಳನ್ನು ರೂಡಿಸಿಕೊಳ್ಳವುದರಿಂದ ಶಿಸ್ತು ಬದ್ದ ಜೀವನ ಹಾಗೂ ಮನೋವಿಕಾಸಕ್ಕೆ ದಾರಿಯಾಗಲಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಗಿರಿಜಾ ಎಸ್ ನಾವದಗಿ ನೀತಿ ಸಂಹಿತೆಯಲ್ಲಿರುವ ತತ್ವಗಳ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡರೆ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಪ್ರೇರೇಪಿಸುತ್ತದೆ ಎಂದರು.

ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾದ ಶ್ರೀ ರಾಮಕೃಷ್ಣ ತ್ಯಾಪಿ ಅವರು ಸ್ವಾಗತಿಸಿದರು. ಶ್ರೀಮತಿ ಸೀತಲ್ ಬಾರ್ಸಿ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಧ್ಯಾಪಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮುಟ್ಟಿನ ನೈರ್ಮಲ್ಯ ದಿನಾಚರಣೆ



**ಬಾಗಲಕೋಟೆ :** ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ: 28/05/2024 ರಂದು ಮುಟ್ಟಿನ ನೈರ್ಮಲ್ಯದಿನಾಚರಣೆಯನ್ನು ಅಕ್ಕಮಹಾದೇವಿ ಮಹಿಳಾ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಬಾಗಲಕೋಟದಲ್ಲಿ ಹಮ್ಮಿಕೊಳ್ಳಲಾಯಿತು. ಕಲಾ, ವಾಣಿಜ್ಯ ಮತ್ತು ವಿಜ್ಞಾನದ ವಿದ್ಯಾರ್ಥಿನಿಯರಿಗೆ ಮುಟ್ಟಿನ ನೈರ್ಮಲ್ಯದ ಬಗ್ಗೆ ಆರೋಗ್ಯ ಶಿಕ್ಷಣವನ್ನು ನೀಡಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀಮತಿ ಎಸ್. ಜೆ. ಒಡೆಯರ್ ಪ್ರಾಚಾರ್ಯರು ಅಕ್ಕಮಹಾದೇವಿ ಮಹಿಳಾ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ ಬಾಗಲಕೋಟ ಇವರು ಎಲ್ಲ ವಿದ್ಯಾರ್ಥಿನಿಯರಿಗೆ ಮುಟ್ಟಿನ ನೈರ್ಮಲ್ಯದ ಬಗ್ಗೆ ಹಾಗೂ ಋತುಸ್ರಾವದ ಸಮಯದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಬಗ್ಗೆ ತಿಳಿಸಿದರು. ಶ್ರೀ ಬಿ.ವಿ.ವಿ.ಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ಶರಣಮ್ಮ ಬಂಟನೂರ ಅವರು ಋತುಸ್ರಾವವು ಒಂದು ಪ್ರಕೃತಿಯ ಕೊಡುಗೆ, ಎಲ್ಲ ಮಹಿಳೆಯರು ಋತುಸ್ರಾವದ ಸಮಯದಲ್ಲಿ ಸ್ವಚ್ಛತೆಯನ್ನು ಕಾಪಾಡದಿದ್ದರೆ ಅದರಿಂದಾಗುವ ಅಡ್ಡ ಪರಿಣಾಮಗಳ ಬಗ್ಗೆ ಮತ್ತು ಆ ತೊಂದರೆಗಳನ್ನು ತಡೆಗಟ್ಟುವ ಬಗೆಯನ್ನು ವಿವರಿಸಿದರು.

ನಾಲ್ಕನೇ ವರ್ಷದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಆರೋಗ್ಯ ಶಿಕ್ಷಣವನ್ನು ನೀಡಿದರು.

ಈ ಕಾರ್ಯಕ್ರಮದಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನದ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು,

ಹಾಗೂ ತೃತೀಯ ವರ್ಷದ ಡಿಪ್ಲೋಮಾ ನರ್ಸಿಂಗ್ ವಿದ್ಯಾರ್ಥಿನಿಯಾದ ಅನುಷಾ ವಾಡಿ ಇವರು ಸ್ವಾಗತಿಸಿ, ಆಕಾಶ್ ಡಂಬಳ ಇವರಿಂದ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

# ಬಡ ರೋಗಿಗಳ ಸಂಜೀವಿನಿ ಡಾ|| ಟಿ.ಹೆಚ್. ಮುಲ್ಲಾ

(ವಿಶೇಷ ವರದಿ)

**ಕೊಪ್ಪಳ :** ನಿವೃತ್ತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಿರಿಯ ವೈದ್ಯ ಡಾಕ್ಟರ್ ಟಿಹೆಚ್ ಮುಲ್ಲಾ ರವರು ಈ ಭಾಗದ ಬಡರೋಗಿಗಳ ಪಾಲಿಗೆ ಸಂಜೀವಿನಿಯಾಗಿ ಕಳೆದ ಐದು ದಶಕದಿಂದ ಶ್ರಮಿಸುತ್ತ ಬಂದಿದ್ದಾರೆ ಅವರಿಗೆ ಜೂನ್ ಒಂದರಂದು 76ನೇ ಜನ್ಮದಿನದ ಶುಭಾಶಯ ಹಾಗೂ 50ನೇ ವರ್ಷದ ಮದುವೆ ವಾರ್ಷಿಕೋತ್ಸವ ಜೊತೆಗೆ ವೈದಿಕೀಯ ಸೇವೆ ಪ್ರಾರಂಭಿಸಿದು ಕೂಡ 50ನೇ ವರ್ಷ ಪೂರ್ಣಗೊಂಡಿದೆ ಅವರು ಈ ಭಾಗದ ಸಾಮಾನ್ಯ ಜನರ ಮತ್ತು ಬಡ ರೋಗಿಗಳ ಚಿರಪರಿಚಿತ ವೈದ್ಯರಾಗಿದ್ದು ಬಹಳಷ್ಟು ರೋಗಗಳನ್ನು ತಮ್ಮ ಹಾಸ್ಯ ಭರಿತ ಮಾತಿನೊಂದಿಗೆ ರೋಗಿಗಳ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾದ ಏಕೈಕ ಹಿರಿಯ ವೈದ್ಯ ಎಂದರೆ ಡಾಕ್ಟರ್ ಡಾಕ್ಟರ್ ಟಿಹೆಚ್ ಮುಲ್ಲಾ ಎಂದು ಹೇಳಬಹುದು

**ಘಟನೆ – 1 :** ಬಹುಶಃ 2001 ನೇ ಇಸವಿ ಇರಬಹುದು. ಹೊಸಪೇಟೆಯ ವಿಜಯ ನಗರ ಕಾಲೇಜಿನಲ್ಲಿ ಓದುತ್ತಿದ್ದೆ. ದಿನಾಲೂ ಕೊಪ್ಪಳದಿಂದಲೇ ಬಸ್ ಮೂಲಕ ಹೋಗಿ ಬರುತ್ತಿದ್ದೆ. ಅದೊಂದು ದಿನ ಮುಂಜಾನೆ ಬಸ್ ಸ್ಟಾಂಡ್ ನಲ್ಲಿ ಮಹಿಳೆಯೊಬ್ಬಳು ತನ್ನ ತೀವ್ರ ಅನರೋಗ್ಯದಿಂದ ಬಳಲುತ್ತಿದ್ದ ಎಂಟತ್ತು ವರ್ಷದ ಮಗನ ಜೊತೆಗೆ ಅಳುತ್ತ ಕುಳಿತಿದ್ದಳು. ಆಕೆಯ ಗೋಳಾಟ ನೋಡಿ ಗುಂಪು ಗುಂಪಾಗಿ ಜನ ಸೇರಿದ್ದರು. "ಹುಬ್ಬಳ್ಳಿಗೆ ಕರಕೊಂಡು ಹೋಗಾಕ ಡಾಕ್ಟರ್ ಹೇಳ್ಯಾರ, ರೊಕ್ಕ ಇಲ್ಲ" ಎಂದು ಗೋಗರೆಯುತ್ತಿದ್ದಳು. ಹುಡುಗ ಬಹಳ ನಿತ್ರಾಣಗೊಂಡಿದ್ದ. ಒಬ್ಬೊಬ್ಬರು ಒಂದೊಂಥರಾ ಮಾತಾಡ್ತಿದ್ದರು. ಒಂದು ಜೋರಾದ ದನಿಯಲ್ಲಿ ಒಬ್ಬ ವ್ಯಕ್ತಿ "ನೋಡವಾ ರೊಕ್ಕ ಇದ್ದರ ಹುಬ್ಬಳ್ಳಿಗೆ ಕರಕೊಂಡು ಹೋಗು, ರೊಕ್ಕ ಇರಲಿಕ್ಕಂದ್ರ ಇಲ್ಲೇ ಪೋಲೀಸ್ ಸ್ಟೇಷನ್ ಕಡೆ ಗಟ–ರ್ ದಂಡಿ ಮೇಲೆ ಮುಲ್ಲಾ ಡಾಕ್ಟರ್ ದವಾಖಾನಿ ಐತಿ ಅಲ್ಲಿಗೆ ಕರ್ಕೊಂಡ್ ಹೋಗು, ನಿನ್ನ ಪರಿಸ್ಥಿತಿ ಹೇಳು ಅವರಿಗೆ, ಎಲ್ಲಾ ಅರಾಮ್ ಮಾಡಿ ಕಳಸ್ತಾರ" ಎಂದ. ಯಾರೋ ಒಬ್ಬರು ಆಟೋ ಮಾಡಿ ಮಹಿಳೆ ಮತ್ತು ಆಕೆಯ ಮಗನನ್ನು ಮುಲ್ಲಾ ಡಾಕ್ಟರ್ ಆಸ್ಪತ್ರೆಗೆ ಕಳಿಸಿಕೊಟ್ಟರು.

**ಘಟನೆ – 2 :** "ಯಪ್ಪಾ ಸ್ವಲ್ಪಾ ರೊಕ್ಕ ಇಟ್ಟು–ಕೊಂಡು ಬಂದಿದ್ದೆ. ಇಂಜೆಕ್ಷನ್, ಔಷಧ, ಗುಳಿಗಿಗೇ ಎಲ್ಲಾ ಖಾಲಿ ಆಗಿ ಹೋತು. ಊರಿಗೋಗಾಕ ಒಂದತ್ತು ರೂಪಾಯಿ ಕಡಿಮಿ ಬಿದ್ದೇತಿ. ಮುಂದಿನ ಸಲ ಬಂದಾಗ ಕೊಡ್ತೀನಿ" ಹಳ್ಳಿಯ ವಯಸ್ಸಾದ ಮಹಿಳೆ ಡಾ. ಮುಲ್ಲಾರನ್ನು ಕೇಳುತ್ತಿದ್ದಳು. "ಏ ತಮ್ಮಾ, ಈ ಯಮ್ಮಂದು ಎಷ್ಟಾಗೇತಿ ನೋಡು ರೊಕ್ಕಾ" ಡಾಕ್ಟರ್ ಮುಲ್ಲಾ ಕೇಳಿದರು. ಒಳಗಿಂದ ಬಂದ ಹುಡುಗ ಮುನ್ನೂರ ನಲವತ್ತು ಆಗೇತಿ ಸರ್ ಎಂದ. "ಆಕಿಗೆ ಎಲ್ಲಾ ರೊಕ್ಕ ವಾಪಸ್ ಕೊಟ್ಟು ಕಳಿಸು ಹಂಗ ರೋಡಿನ ತನ ಹೋಗಿ ಯಾವರ ಆಟೋ ಹತ್ತಿಸಿ ಬಸ್ ಸ್ಟಾಂಡ್ ಗೆ ಕಳಿಸು" ಎಂದರು. ಮಹಿಳೆ ಭಾವುಕಳಾಗಿ ಡಾಕ್ಟರ್ ಗೆ ಹರಸುತ್ತ ಹೋದಳು.

**ಘಟನೆ – 3 :** ಆಸ್ಪತ್ರೆ ಸಮೀಪ ಅಪಘಾತವಾಯಿತು. ಒಳಗಿದ್ದ ಡಾಕ್ಟರ್ ಮುಲ್ಲಾ "ಏನಾ ಸೌಂಡ್ ಆತು ನೋಡ ತಮ್ಮ" ಎಂದು ಕಂಪೌಂಡರ್ ಗೆ ಕೇಳಿದರು. ಹೊರಗೆ ಇಣುಕಿ ಬಂದ ಹುಡುಗ "ಎಕ್ಸಿಡೆ–ಂಟ್ ಆಗೇತಿ ಸರ್, ಇಬ್ಬರಿಗೆ ಬಹಳ ರಕ್ತ ಬರಾಕತ್ಯೆತಿ" ಎಂದ. ಒಳಗಿದ್ದ ಡಾಕ್ಟರ್ ತಕ್ಷಣವೇ ಸ್ಥೆತೋಸ್ಕೋಪ್, ಕಾಟನ್ ಹಿಡಿದು ಓಡುತ್ತ ಹೋಗಿ ರಸ್ತೆಯಲ್ಲಿ ಬಿದ್ದಿದ್ದ ಹುಡುಗರಿಗೆ ಚಿಕಿತ್ಸೆ ಕೊಟ್ಟು, ನಿಧಾನವಾಗಿ ಹೋಗುವಂತೆ ತಿಳಿ ಹೇಳಿ ವಾಪಸ್ಸಾದರು.

ಮುಲ್ಲಾ ಡಾಕ್ಟರ್ ಎಂದೇ ಕೊಪ್ಪಳ ಮತ್ತು ಸುತ್ತಲ ಹಳ್ಳಿಗಳಲ್ಲಿ ಜನ ಜನಿತವಾಗಿರುವ ಡಾ. ಟಿ.ಎಚ್. ಮುಲ್ಲಾ ಅವರ ಈ ಮೇಲಿನ ಮೂರು ಘಟನೆಗಳಿಗೆ ನಾನು ಸಾಕ್ಷಿಯಾಗಿದ್ದೇನೆ.

ಕೊಪ್ಪಳ ಇದೀಗ ವಿವಿಧ ನುರಿತ ವೈದ್ಯರುಗಳಿಂದ ತುಂಬಿ ಹೋಗಿದೆ. ಇದು ಬಹಳ ಸ್ವಾಗತಾರ್ಹ. ಆದರೆ ಹದಿನೈದರಿಂದ–ಇಪ್ಪತ್ತು ವರ್ಷಗಳ ಹಿಂದೆ ಕೇವಲ ಬೆರಳೆಣಿಕೆಯ ವೈದ್ಯರುಗಳಿದ್ದರು. ಈ ಬೆರಳೆಣಿಕೆಯಷ್ಟಿದ್ದ ವೈದ್ಯರ ಜೀವಪರ ಕಾಳಜಿ, ಅವರ ಕೊಡುಗೆ ಬಹಳ ದೊಡ್ಡದು. ಇಂತಹ ಅನನ್ಯ ಸೇವೆಗೈದ ವೈದ್ಯರ ಸಾಲುಗಳಲ್ಲಿ ಒಬ್ಬರು ಡಾ. ಟಿ.ಎಚ್. ಮುಲ್ಲಾ.

ಒಂದು ಕಾಲದಲ್ಲಿ ಕೊಪ್ಪಳ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಇಬ್ಬರು ವೈದ್ಯರ ಕೊಠಡಿಗಳ ಮುಂದೆ ನೂರಾರು ಸಂ–ಖ್ಯೆಯ ರೋಗಿಗಳ ಸಾಲು ದಿನವೂ ತುಂಬಿರುತ್ತಿತ್ತು. ಒಬ್ಬರು ಡಾ. ಎಂ.ಬಿ. ರಾಂಪೂರ ಮತ್ತು ಇನ್ನೊಬ್ಬರು ಡಾ.





ಟಿ.ಎಚ್. ಮುಲ್ಲಾ. ಬಹುಶಃ ಕೊಪ್ಪಳ ವೈದ್ಯಕೀಯ ಕ್ಷೇತ್ರದ ಬಗೆಗೆ ಬರೆಯವಾಗ, ಮಾತಾಡುವಾಗ, ಚರ್ಚಿಸುವಾಗ ಡಾ. ಎಂ.ಬಿ. ರಾಂಪೂರ ಅವರ ಹೆಸರನ್ನು ಉಲ್ಲೇಖಿಸದಿದ್ದರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಡಾ. ರಾಂಪೂರ ಮತ್ತು ಡಾ. ಮುಲ್ಲಾ ನಾಣ್ಯದೆರಡು ಮುಖಗಳಂತೆ ಕೊಪ್ಪಳ ಸರಕಾರಿ ಜಿಲ್ಲಾಸ್ಪತ್ರೆಯಲ್ಲಿ ಅವಿರತ ಸೇವೆಗೈದರು.

ವೈದ್ಯಕೀಯ ವೃತ್ತಿಯಲ್ಲಿ ಸಮಾಜಮುಖಿಯಾಗಿ ಸೇವೆಗೈದ ಹಿರಿಯ ವೈದ್ಯರುಗಳೆಲ್ಲ ನಮಗೀಗ ಹೆಚ್ಚು ನೆನಪಾಗುತ್ತಾರೆ.

ಹಳ್ಳಿಗರ ಮನೆಮಾತಾಗಿರುವ ಡಾಕ್ಟರ್ ಟಿ.ಎಚ್. ಮುಲ್ಲಾ ಅವರು ಭರ್ತಿ ಐವತ್ತು ವರ್ಷಗಳ ವೈದ್ಯಕೀಯ ಸೇವೆ ಸಲ್ಲಿಸಿದ್ದಾರೆ. 1974 ರ ಮೇ ತಿಂಗಳಲ್ಲಿ ವೈದ್ಯಕೀಯ ವೃತ್ತಿ ಆರಂಭಿಸಿದರು. ಇದೇ 1974 ರ ಮೇ ತಿಂಗಳಲ್ಲಿಯೇ ಮದುವೆಯಾದ ಇವರು ದಾಂಪತ್ಯದ ಸುವರ್ಣ ಮಹೋತ್ಸವವನ್ನೂ ಆಚರಿಸಿಕೊಂಡಿದ್ದಾರೆ. ಮತ್ತೀಗ ಜೂನ್ 1, 2024 ಕ್ಕೆ 75 ನೇ ವರ್ಷದ ಜನ್ಮದಿನ ಆಚರಿಸಿಕೊಳ್ಳುತ್ತಿದ್ದಾರೆ. ಒಟ್ಟಾರೆ ಇವರಿಗಿದು ಹ್ಯಾಟ್ರಿಕ್ ಸಂಭ್ರಮದ ಪರ್ವ ಕಾಲ.

ವೃತ್ತಿಯ ಜೊತೆ ಸದಾ ಕಾಲ ಸೌಹಾರ್ದತೆಯ ಪ್ರತೀಕವಾಗಿ ಇವರು ನಿಲ್ಲುತ್ತಾರೆ. ನಗುತ್ತ – ನಗಿಸುತ್ತಲೇ ರೋ–ಗಿಯ ಅರ್ಧ ರೋಗ ವಾಸಿಯಾಯಿತೆನ್ನುವ ಮಟ್ಟಿಗೆ ಧೈರ್ಯ ತುಂಬುತ್ತಾರೆ. ಸಾಂಸಾರಿಕ ಸಂಬಂಧಗಳನ್ನೂ ಗಟ್ಟಿಗೊಳಿಸುತ್ತಾರೆ. ವಯಸ್ಸಾದ ಮಹಿಳೆ ಚಿಕಿತ್ಸೆಗೆ ಬಂದರೆ "ಸೊಸೆಯನ್ನ ಬಾಳ ನಡೆಸಿಗೆಂಡ್ರ ಹಿಂಗ ಆಗುತ್ತ ನೋಡ ಬೇ, ಮಗಳನ್ನ ಹೆಂಗ ನೋಡಕೆಂತಿ ಹಂಗಾ ಸೊಸೆಯನ್ನೂ ನೋಡಿಕೋ" ಎಂದೂ ಸೊಸೆ ಚಿಕಿತ್ಸೆಗೆ ಬಂದರೆ "ಅತ್ತಿನ್ನ ಭಲೋ ನೋಡಿಕೊಳ್ಳಲಿಕ್ಕಂದ್ರ ಅರಾಮ ಇಲ್ಲದಂಗ ಆಕ್ಯೆತಿ, ಎರಡು ಬಿಸಿ ರೊಟ್ಟಿ, ಒಂದಿಷ್ಟು ಅನ್ನ ಕೊಟ್ಟು ಭಲೋ ನೋಡಿಕೆಂಡ್ರ ಆಕೀನೂ ಅರಾಮ ಇರ್ತಾಳ, ಅದರ ಪುಣ್ಯದಿಂದ ನೀನೂ ಅರಾಮ ಇರ್ತಿ" ಎಂದು ನಗುತ್ತ – ತಿಳಿಮಾತಿನ ಮೂಲಕ ನೀಡುವ ಚಿಕಿತ್ಸೆ ಖಂಡಿತವಾಗಿಯೂ ಧನಾತ್ಮಕ ಸಮಾಜ ಕಟ್ಟುವ ನೆಲೆಯೇ ಆಗಿದೆ.

ಸಲಹೆಗಾಗಿ ತಮ್ಮನ್ನು ಹುಡುಕಿಕೊಂಡು ಬಂದವರಿಗೆ ಧೈರ್ಯ ನೀಡಿ, ಮುಂದಿನ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಸಾಧಕ–ಬಾಧಕಗಳ ಬಗ್ಗೆ ವಿವರಿಸಿ, ಧೈರ್ಯ ತುಂಬುತ್ತಾರೆ. ಆಸ್ಪತ್ರೆಯ ಎಲ್ಲ ಸಿಬ್ಬಂದಿಯವರನ್ನೂ ಸಮಾನವಾಗಿ ಕಾಣುತ್ತಾರೆ. ಇವರ ಕೈಯಲ್ಲಿ ಪಳಗಿದ ನೂರಾರು ನರ್ಸ್ ಗಳು, ಕೆಲಸಗಾರರು ಇದೀಗ ಉತ್ತಮ ಜೀವನ ನಡೆಸುತ್ತಿದ್ದಾರೆ.

ಆಸ್ಪತ್ರೆಗೆ ಹಣ ಇಲ್ಲದೇ ಬಂದು ಚಿಕಿತ್ಸೆ ಪಡೆದವರ, ಉದ್ರಿ ಹೇಳಿದ ಬಡವರ, ಪರಿಚಯಸ್ಥರ ಸಂಖ್ಯೆ ಸಾವಿರ ಸಾವಿರದಷ್ಟಿದೆ. "ಮುಲ್ಲಾ ಡಾಕ್ಟರ್ ಕಡೆ ತೋರಿಸಿಕೊಂಡರೆ ಮಾತ್ರ ಅರಾಮ ಆಗುತ್ತೆ" ಎನ್ನುವ ಮನಸ್ಥಿತಿ ಬಹುತೇಕ ಹಳ್ಳಿಗರದು. ಇವರ ಆಸ್ಪತ್ರೆಯಲ್ಲಿ ಈಗಲೂ ಕನ್ಸಲ್ಟೇಶನ್ ಶುಲ್ಕ ಇಲ್ಲ. ವರ್ಷದ ಹಿಂದೆ ಕನ್ಸಲ್ಟೇಶನ್ ಫೀ ಐವತ್ತು ರೂಪಾಯಿ ಮಾಡಿದ್ದರು. ಗ್ರಾಮೀಣ ಜನರಿಗೆ ತೊಂದರೆಯಾಯಿತೆಂದು ಆ ಐವತ್ತು ರೂಪಾಯಿಯನ್ನೂ ತೆಗೆದು ಹಾಕಿದ್ದಾರೆ.

ಕೋವಿಡ್ ಸಂದರ್ಭದಲ್ಲಿಯೂ ನಿರಂತರವಾಗಿ ಧೈರ್ಯದಿಂದಲೇ ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ.

ಮೂಲತಃ ಮುಂಡರಗಿ ತಾಲೂಕಿನ ಕಲಕೇರಿ ಗ್ರಾಮದವರು. ಒಕ್ಕಲುತನ ಮನೆತನದ ಹೊನ್ನೂರ ಸಾಹೇಬ ಮತ್ತು ಇಮಾಮ್ ಬೀ ದಂಪತಿಗಳಿಗೆ ಒಂಭತ್ತು ಮಕ್ಕಳು. ನಾಲ್ವರು ಪುತ್ರರಲ್ಲಿ ಇವರು ಕೊನೆಯವರು. ತಂದೆ ಹೊನ್ನೂರಸಾಬ ಮದುವಿ, ಮುಂಜಿ, ಅಂತ್ಯಸಂಸ್ಕಾರ ಹೀಗೆ ಸಮಾಜದ ಎಲ್ಲ ಕೆಲಸ ಕಾರ್ಯಗಳನ್ನು ನೆರವೇರಿಸುತ್ತಿದ್ದವರು. ಹೀಗಾಗಿ 'ಮುಲ್ಲಾ' ಅಡ್ಡ ಹೆಸರು ಬಂದಿದೆ. ಕಲಕೇರಿಯ ಕನ್ನಡ ಮಾಧ್ಯಮ ಸರಕಾರಿ ಶಾಲೆಯಲ್ಲಿ ಪ್ರಾಥಮಿಕ, ಆನಂತರ ಮುಂಡರಗಿ ಅನ್ನದಾನೇಶ್ವರ ಶಾಲೆಯಲ್ಲಿ ಪ್ರೌಢಶಿಕ್ಷಣ ಮುಗಿಸಿ, ಜಮಖಂಡಿಯ ಬಿ.ಎಲ್.ಡಿ. ಕಾಲೇಜಿನಲ್ಲಿ ಪಿ.ಯು.ಸಿ.ಯನ್ನು ಕಾಲೇಜಿಗೇ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ಯಶಸ್ವಿಯಾಗಿ ಮುಗಿಸಿದರು. ವಿಜ್ಞಾನ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಗಳಿಸಿ, ವೈದ್ಯಕೀಯ ಕೋರ್ಸಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಈ ಕಾಲೇಜಿನಲ್ಲಿ ಡಾ. ಹಲ್ಯಾಳಕರ್ ಹೆಸರಿನ ಪ್ರಶಸ್ತಿ ನೀಡುವ ವಾಡಿಕೆಯಿತ್ತು. ಈ ಪ್ರಶಸ್ತಿಗೆ ವಿದ್ಯಾರ್ಥಿ ದೆಸೆಯ ಡಾ. ಟಿ.ಎಚ್. ಮುಲ್ಲಾ ಭಾಜನರಾಗಿದ್ದರು. 1968 ರಿಂದ 74 ರ ವರೆಗೆ ಹುಬ್ಬಳ್ಳಿಯಲ್ಲಿ ವೈದ್ಯಕೀಯ ವೃತ್ತಿ ಪಡೆದು 1974 ರಲ್ಲಿ ಮೊದಲು ಅಳವಂಡಿಯಲ್ಲಿ ಠಿಡಿಚಿಛಿ–ಣಛಿಜ ಆರಂಭಿಸಿ ಆರು ವರ್ಷ ಸೇವೆ ಸಲ್ಲಿಸುತ್ತಾರೆ.

ಕವಲೂರಿನಲ್ಲಿ ನಾಲ್ಕು ವರ್ಷ, ಸಿಂಧೋಗಿಯಲ್ಲಿ ಎರಡು ವರ್ಷ, ತದನಂತರದಲ್ಲಿ 12 ವರ್ಷಗಳ ಸುದೀರ್ಘ ಅವಧಿಯನ್ನು ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ನೀಡಿ, ಜಿಲ್ಲಾ ಸರ್ಜನ್, ಡಿ.ಎಚ್.ಓ. ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿ ನಿವೃತ್ತಿಯಾಗುತ್ತಾರೆ. ನಿವೃತ್ತಿ ನಂತರವೂ ಠಿಟಿಂಡಿಚಿಡಿಥಿ ಯಾಗಿ ಏಳು ವರ್ಷ ಕೊಪ್ಪಳ ಜಿಲ್ಲಾಸ್ಪತ್ರೆಯ ಎ.ಆರ್.ಟಿ. ಸೆಂಟರ್ ನಲ್ಲಿ, ಏಳು ವರ್ಷ ಅಲ್ಟ್ರಾಟೆಕ್ ಕಾರ್ಖಾನೆಯಲ್ಲಿ ವಿಸಿಟಿಂಗ್ ವೈದ್ಯರಾಗಿ ಕರ್ತವ್ಯ ನಿಭಾಯಿಸಿ, ಇದೀಗ ತಮ್ಮದೇ ಸುಹೇಲ್ ಕ್ಲಿನಿಕ್ ನಲ್ಲಿ ಸದಾ ನಗು ಮೊಗದಿಂದಲೇ ಚಿಕಿತ್ಸೆಗೆ ಅಣಿಯಾಗಿರುತ್ತಾರೆ.

ಇವರ ವೈದ್ಯಕೀಯ ವೃತ್ತಿಯ ಐವತ್ತು ವರ್ಷಗಳಲ್ಲಿ ಮೂವತ್ಮೂರು ವರ್ಷಗಳ ಕಾಲ ಕೊಪ್ಪಳದಲ್ಲಿಯೇ ಸೇವೆ ಸಲ್ಲಿಸಿದ್ದಾರೆ.

2002 ರಲ್ಲಿ ವೈದ್ಯಶ್ರೀ ಪ್ರಶಸ್ತಿ, 2006 ರಲ್ಲಿ ವೈದ್ಯ ವಿಭೂಷಣ ಮತ್ತು ಅತ್ಯುತ್ತಮ ನಾಗರಿಕ ಸೇವಾ ಪ್ರಶಸ್ತಿ, 2007 ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2008 ರಲ್ಲಿ ಪ್ರೌಢದೇವರಾಯ ಪ್ರಶಸ್ತಿ, 2009 ರಲ್ಲಿ ವಿದ್ಯಾ ರತ್ನ ಪ್ರಶಸ್ತಿ, 2010 ರಲ್ಲಿ ಕುಮಾರ ವ್ಯಾಸ ಪ್ರಶಸ್ತಿ ಹೀಗೆ ಹಲವು ಆದರಗಳು ಇವರನ್ನು ಹುಡುಕಿಕೊಂಡು ಬಂದಿವೆ.

ಇವೆಲ್ಲವುಗಳಿಗಿಂತ ಜನತೆ ಕೊಟ್ಟ 'ಬೆಲ್ಲದಂಥ ಮುಲ್ಲಾ ಡಾಕ್ಟರ್' ಬಿರುದು ಇವರ ಜನಪರ ಸೇವೆಗೆ ಹಿಡಿದ ಕನ್ನಡಿಯಾಗಿದೆ.

ಜೂನ್ 1 ಕ್ಕೆ ಇವರಿಗೆ 75 ವರ್ಷಗಳು ತುಂಬುತ್ತವೆ. ಜೀವಗಳನ್ನುಳಿಸುವ ಅಮೂಲ್ಯ ವೈದ್ಯಕೀಯ ವೃತ್ತಿಗೆ ಇಂಥವರು ಕಿರೀಟಪ್ರಾಯವಾಗುತ್ತಾರೆ. ಎಪ್ಪತ್ತೈದಾದರೂ – ಇಪ್ಪತ್ತೈದರಂತೆ ಲವಲವಿಕೆಯಿಂದ ಓಡಾಡುವ, ನಗು ಮೊಗದ ಇವರ ಸಾರ್ಥಕ ಬದುಕಿನ ಹೆಜ್ಜೆಗುಂಟ ಇವರ ಮಡದಿ ಶಾಕೀರಾ ಬೇಗಂ ರ ಪಾತ್ರ ಬಹಳ ದೊಡ್ಡದಿದೆ.

ಮಗ ಸುಹೇಲ್ ತಂದೆಗಿಂತಲೂ ಬಹಳ ಉದಾರಿ, ಸೌಮ್ಯ ಸ್ವಭಾವದಿಂದ ಎಲ್ಲರ ಗಮನ ಸೆಳೆಯುತ್ತಾರೆ. ಆಸ್ಪತ್ರೆಗೆ ಸುಹೇಲರನ್ನು ಕೇಳಿಕೊಂಡು ಬರುವವರ ಸಂಖ್ಯೆಯೂ ದೊಡ್ಡದಿದೆ. ಇವರ ಮಡದಿ ನವಶೀನ್ ಇಡೀಮನೆಯ ಜವಾಬ್ದಾರಿ ನಿರ್ವಹಿಸುತ್ತಾರೆ.

ಮಗಳು ಶಗುಫ್ತಾ ಆಫ್ರೀನ್ ಕೂಡ ಅಷ್ಟೇ ಸೌಮ್ಯ.

ಅಳಿಯ ಡಾ. ಶಫಿ ಉಲ್ಲಾ ಹುಲಗಿಯ ಸರಕಾರಿ ವೈದ್ಯಾಧಿಕಾರಿಗಳು. ಡಯಬಿಟಾಲಜಿ ಸ್ಪೆಷಲಿಸ್ಟ್.

ಮಹ್ಮದ್ ಸಲೀಂ, ಮಹ್ಮದ್ ಶೈಜಾದ್, ಆಯೀರಾ ರೂಮೇಜಾ, ಮಹ್ಮದ್ ಆರೀಜ್ ಮುದ್ದಿನ ಮೊಮ್ಮಕ್ಕಳು.

ಪಾದರಸದ ಲವ ಲವಿಕೆಯ ನಮ್ಮೂರ ಮುಲ್ಲಾ ಡಾಕ್ಟರ್ ಗೆ ಜನ್ಮದಿನದ ಆಶಯಗಳು. ಸರಕಾರಿ ವೃತ್ತಿಯಿಂದ ನಿವೃತ್ತಿ ಯಾಗಿರಬಹುದು, ಜನಮಾನಸದಿಂದಲ್ಲ. ತಮ್ಮ ಸೇವೆಗೆ, ತಮ್ಮ ಉದಾರತೆಗೆ, ಕಾಳಜಿಗೆ ಸದಾ ನಿಮ್ಮೊಡನೆ ಜನಸಾಗರದ ಬೆಂಬಲವಿದೆ. ಎಂದು ಬರಹಗಾರ ಮಹೇಶ್ ಬಳ್ಳಾರಿ ವಿವರಿಸಿ ಡಾ. ಟಿಹೆಚ್ ಮುಲ್ಲಾ ರವರಿಗೆ ಅಭಿನಂದಿಸಿದ್ದಾರೆ.

# ಕೃಷ್ಣಾ ನದಿಗೆ ಬಂತು ನೀರು; ನಿಟ್ಟುಸಿರು ಬಿಟ್ಟ ಜನತೆ

**ರಬಕವಿ–ಬನಹಟ್ಟಿ:** ಹದಿನೈದುದಿನಗಳಿಗಿಂತ ಹೆಚ್ಚು ಕಾಲ ಸಂಪೂರ್ಣವಾಗಿ ಬತ್ತಿ ಹೋಗಿದ್ದ ಕೃಷ್ಣಾ ನದಿಗೆ ನೀರು ಹರಿದು ಬರುತ್ತಿದೆ. ಮಹಾರಾಷ್ಟ್ರವು ಕೊಯ್ನಾ ಜಲಾಶಯದಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶದ ರಾಜಾಪುರ ಬ್ಯಾರೇಜ್ ಮೂಲಕ ನೀರು ಹರಿಸಿತ್ತು. ಬುಧವಾರ ಸಂಜೆ ರಬಕವಿಯ ಸಮೀಪದ ಮಹಿಷವಾಡಗಿ ಬ್ಯಾರೇಜ್ ಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಬಂದಿದ್ದು, ಗುರುವಾರ ಕೃಷ್ಣಾ ನದಿಯ ನೀರು ಹಿಪ್ಪರಗಿ ಜಲಾಶಯವನ್ನು ಕೂಡಾ ತಲುಪಿದೆ.



ಕೃಷ್ಣಾ ನದಿಗೆ ನೀರು ಹರಿದು ಬರುತ್ತಿರುವುದರಿಂದರಬಕವಿಬನಹಟ್ಟಿಸುತ್ತ ಮುತ್ತಲಿನ ಜನ, ಜಾನುವಾರುಗಳಿಗೆ ಮತ್ತು ರೈತರ ಬೆಳೆಗಳಿಗೆ ಅನುಕೂಲವಾಗಿದೆ. ಅದೇ ರೀತಿಯಾಗಿ ರಬಕವಿ ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶದ ಜನರು ನಿಟ್ಟುಸಿರು ಬಿಟ್ಟಂತಾಗಿದೆ. ಅವಳಿನಗರಗಳಲ್ಲಿ ನದಿನೀರನ್ನುನಾಳದಮೂಲಕ ಸರಬರಾಜು ಕಾರ್ಯ ನಡೆದಿದೆ. ನೀರನ್ನು ಕಾಯಿಸಿ ಆರಿಸಿ ಕುಡಿಯಿರಿ; ಕೃಷ್ಣಾ ನದಿಯ ನೀರನ್ನು ಕೇವಲ ಬಳಕೆಗೆ ಮಾತ್ರ ಬಳಸಿಕೊಳ್ಳಬೇಕು. ಕೃಷ್ಣಾ ನದಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಬಂದಿದ್ದರಿಂದ ಜನರಿಗೆ ಅನುಕೂಲವಾಗಿದೆ ಎಂದು ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು. ಕೃಷ್ಣಾ ನದಿಯ ನೀರು ಹಿಪ್ಪರಗಿ ಬ್ಯಾರೇಜ್ನ್ನು ಗುರುವಾರ ಬೆಳಿಗ್ಗೆ ತಲುಪಿದ್ದು, ನೀರಿನ ಪ್ರವಾಹದ ವೇಗವು ಕಡಿಮೆ ಇದೆ. ಇದು ಕೇವಲ ಹೆಚ್ಚುವರಿ ನೀರು ಮಾತ್ರ ಆಗಿದೆ. ಮಹಾರಾಷ್ಟ್ರದಲ್ಲಿ ಮಳೆಯು ಶುರುವಾದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಬ್ಯಾರೇಜ್ ನ ಸಹಾಯಕ ಎಂಜಿನಿಯರ್ ವಿ. ಎನ್. ನಾಯಕ ತಿಳಿಸಿದರು.

# ಬಸ್ ನಿಲುಗಡೆ ಆದೇಶದ ಕುರಿತು ಗಮನಕ್ಕೆ ತಂದ ಸಚಿವರ ಆಪ್ತ ಕಾರ್ಯದರ್ಶಿ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಸಾರವಾಡ ಹಾಗೂ ರಾಂಪೂರ ಗ್ರಾಮಗಳಿಗೆ ಬಸ್ ನಿಲುಗಡೆಯ ಸಮಸ್ಯೆ ಬಗೆಹರಿಸುವ ಕುರಿತು ಸಾರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಸಚಿವ ಎಂ ಬಿ ಪಾಟೀಲರ ಆಪ್ತ ಕಾರ್ಯದರ್ಶಿ ಸಂತೋಷ ಲೋಕುರಿ ರವರು ಎರಡು ಗ್ರಾಮಗಳಿಗೆ ಭೇಟಿ ನೀಡಿದರು,



ಈ ಮಾರ್ಗದಲ್ಲಿ ಸಂಚರಿಸುವ ಎಲ್ಲಾ ಬಸ್ಸುಗಳಲ್ಲಿ ಸಾರ್ವಜನಿಕರಿಗೆ ಪ್ರಯಾಣಿಸಲು ಬಸ್ಸುಗಳು ನಿಲ್ಲಿಸಿ, ನಿಲುಗಡೆಯ ಆದೇಶ ಮಾಡಿರುವ ಕುರಿತು ಚಾಲಕ ನಿರ್ವಾಹಕರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಎರಡು ಗ್ರಾಮಗಳ ಹಲವಾರು ಮುಖಂಡರು ಹಾಗೂ ಗ್ರಾಮದ ಯುವಕರು ಉಪಸ್ಥಿತರಿದ್ದರು.

## ಅಕ್ರಮ ಭ್ರೂಣಹತ್ಯೆ ಪ್ರಕರಣ: ಗರ್ಭಪಾತ ಮಾಡಿಸಿಕೊಂಡ ಮಹಾರಾಷ್ಟ್ರ ಮೂಲದ ಮಹಿಳೆ ಸಾವು


# ಮೂವರ ಬಂಧನ: ಏಳು ಜನರ ವಿರುದ್ಧ ಪ್ರಕರಣ ದಾಖಲು

**ಮಹಾಲಿಂಗಪುರ :** ಮನೆಯಲ್ಲಿಯೇ ಅಕ್ರಮವಾಗಿ ಭ್ರೂಣಹತ್ಯೆ ಮಾಡುತ್ತಿದ್ದ ಮಹಾಲಿಂಗಪುರದ ಮಹಿಳೆ ಹಾಗೂ ಭ್ರೂಣಹತ್ಯೆ ಪ್ರಕರಣದಲ್ಲಿ ಭಾಗಿಯಾದ ಮಹಾರಾಷ್ಟ್ರದ ಇಬ್ಬರು ಸೇರಿದಂತೆ ಮೂವರನ್ನು ಬುಧವಾರ ಮಹಾಲಿಂಗಪುರ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮಹಾಲಿಂಗಪುರ ಪಟ್ಟಣದ ಜಯಲಕ್ಷ್ಮೀ ನಗರದ ಕವಿತಾ ಬಾಡನವರ, ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ದೂದ್‌ಗಾಂವದ ವಿಜಯ ಸಂಜಯ ಗೌಳಿ ಕುಪ್ಪವಾಡದ ಡಾ.ಮಾರುತಿ ಬಾಬಸೋ ಖರಾತ ಬಂಧಿತ ಆರೋಪಿಗಳು.







**ಘಟನೆ ವಿವರ :**

ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಸಂಜಯ ಗೌಳಿ, ಸಂಗೀತಾ ಗೌಳಿ, ವಿಜಯ ಗೌಳಿ, ಡಾ.ಮಾರುತಿ ಖರಾತ, ಅಥಣಿಯ ರಾಮಾನಂದ ನಗರದ ಡಾ.ಕೊತ್ವಾಲೆ, ಮಹಾಲಿಂಗಪುರದ ಕವಿತಾ ಬಾಡನವರ, ಒಬ್ಬ ಸೋನೋಗ್ರಾಫರ್ ಸೇರಿದಂತೆ ಏಳು ಜನರ ವಿರುದ್ಧ ಮಹಾರಾಷ್ಟ್ರದ ಸಾಂಗಲಿ ಹಾಗೂ ಮಹಾಲಿಂಗಪುರದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣ ದಾಖಲಾದ ಏಳು ಜನರು ಸಹಕಾರದಿಂದ ಮಹಾಲಿಂಗಪುರದ ಕವಿತಾ ಬಾಡನವರ ಮನೆಯಲ್ಲಿ ಮೇ.27ರ ರಾತ್ರಿ 11ಕ್ಕೆ ಮಹಾರಾಷ್ಟ್ರ ಮೂಲದ ಮಹಿಳೆ ಸೋನಾಲಿ ಸಚಿನ ಕದಂ(32) ಎಂಬ ಮಹಿಳೆಯ ಗರ್ಭಪಾತ ಮಾಡಿದ್ದಾರೆ.

ಗರ್ಭಪಾತ ಮಾಡಿದ ನಂತರ ಮಹಿಳೆಯು ತೀವ್ರರಕ್ತಸ್ರಾವವಾಗಿ ಮಹಿಳೆ ಮೃತಪಟ್ಟಿದ್ದಾಳೆ. ಮರಳಿ ಮಹಾರಾಷ್ಟ್ರದ ಸಾಂಗಲಿಗೆ ಹೋಗುವಾಗ ಗಡಿಚೆಕ್‌ಪೋಸ್ಟ್‌ನಲ್ಲಿ ಮಹಾರಾಷ್ಟ್ರದ ಸಾಂಗಲಿ ಪೋಲೀಸರಿಗೆ ಸಿಕ್ಕಿದ್ದರಿಂದ, ಸಾಂಗಲಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬಾಗಲಕೋಟೆಗೆ ವರ್ಗಾವಣೆ :**

ಬುಧವಾರ ಸಾಂಗಲಿ ಪೋಲೀಸರು ಬಾಗಲಕೋಟೆಯ ಎಸ್‌ಪಿ ಆಫೀಸಗೆ ತೆರಳಿ ಭ್ರೂಣಹತ್ಯೆ ಪ್ರಕರಣ ಮಾಹಿತಿ ನೀಡಿದ್ದಾರೆ. ಎಸ್‌ಪಿ ಅವರ ಆದೇಶದಂತೆ ಸ್ಥಳೀಯ ಠಾಣಾಧಿಕಾರಿ ಪ್ರವೀಣ ಬೀಳಗಿ ಹಾಗೂ ಪೊಲೀಸರು ಪಟ್ಟಣದ ಕವಿತಾ ಬಾಡನವರ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು.

**ಅಧಿಕಾರಿಗಳಿಂದ ಮನೆ ಮೇಲೆ ದಾಳಿ :**

ಪ್ರಕರಣದ ವಿಷಯ ಬೆಳಕಿಗೆ ಬರುತ್ತಿದ್ದಂತೆ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಅರವಿಂದ ಪಟ್ಟಣಶೆಟ್ಟಿ, ಮುಧೋಳ ಟಿಎಚ್‌ಓ ವೆಂಕಟೇಶ ಮಲಘಾಣ, ರಬಕವಿ–ಬನಹಟ್ಟಿ ತಹಶೀಲ್ದಾರಗಿರೀಶಸ್ವಾದಿ,ಬನಹಟ್ಟಿಸಿಪಿಐಯ್ ಸಂಜೀವ ಬಳಗಾರ, ಪಿಎಸ್‌ಆಯ್ ಪ್ರವೀಣ ಬೀಳಗಿ ಅವರು ಕವಿತಾ ಬಾಡನವರ ಮನೆಯ ಮೇಲೆ ದಾಳಿ ನಡೆಸಿದಾಗ ಮನೆಯಲ್ಲಿಯೇ ಗರ್ಭಪಾತ ಮಾಡಲು ಬಳಸುತ್ತಿದ್ದ ವೈದ್ಯಕೀಯ ಪರಿಕರಗಳು, ಔಷಧಿ ಮಾತ್ರೆಗಳು ಸೇರಿದಂತೆ ಅಗತ್ಯ ದಾಖಲೆಗಳು ಸಿಕ್ಕಿವೆ.

> **ಭಾರಿ ಕುಳಗಳು ಸಿಕ್ಕಿಬೀಳುವ ಸಾಧ್ಯತೆ?**
>
> **ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಯಾವುದೇ ರಾಜಕೀಯ ಒತ್ತಡಕ್ಕೆ ಮನೀಯದೇ ಸದರಿ ಭ್ರೂಣಹತ್ಯೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಕವಿತಾ ಬಾಡನವರ ಅವರ ಮೋಬೈಲ್‌ಗೆ ಬಂದ ಕರೆಗಳು ಮತ್ತು ಭಾರಿ ಹಣ ವರ್ಗಾವಣೆಯಾಗಿರುವ ಪೋನ್ ಪೇ ನಂಬರಗಳ ತನಿಖೆ ನಡಿಸಿದರೆ ಈ ಕೇಸ್‌ನಲ್ಲಿ ಭಾರಿ ಕುಳಗಳು ಸಿಕ್ಕಿ ಬೀಳುವ ಸಾಧ್ಯತೆಯು ದಟ್ಟವಾಗಿದೆ.**

**ಹಿಂದೆಯೂ ಎರಡು ಬಾರಿ ದಾಳಿ :**

ದಶಕಗಳ ಹಿಂದೆ ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ಕವಿತಾ ಬಾಡನವರ ಅವರು ಕಳೆದ 7–8 ವರ್ಷಗಳಿಂದ ಅಕ್ರಮವಾಗಿ ಭ್ರೂಣಪತ್ಯೆ ಹಾಗೂ ಭ್ರೂಣಹತ್ಯೆ ಮಾಡುತ್ತಿದ್ದರು ಎನ್ನಲಾಗಿದೆ. ವಿಚಿತ್ರವೆಂದರೆ 30–3–2019 ಮತ್ತು 22–8–2022ರಂದು ಎರಡು ಬಾರಿ ಮುಧೋಳ ಟಿಎಚ್‌ಓ ವೆಂಕಟೇಶ ಮಲಘಾಣ ಅವರು ಕವಿತಾ ಬಾಡನವರ ಮನೆ ಮೇಲೆ ದಾಳಿ ನಡೆಸಿದ್ದರು.

2022ರಲ್ಲಿ ದಾಳಿ ನಡೆಸಿದ್ದ ಟಿಎಚ್‌ಓ ಅವರು ಮನೆಯ ಮುಖ್ಯದ್ವಾರಕ್ಕೆ ಶೀಲ್ ಹಾಕಿದ್ದರು. ಸದರಿ ದಾಳಿಗೆ ಸಂಬಂಸಿದಂತೆ ಬನಹಟ್ಟಿಯ ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿದೆ. ಆದರೂ ಇಂದಿಗೂ ಮುಖ್ಯದ್ವಾರಕ್ಕೆ ಶೀಲ್ ಹಾಗೆ ಇದೆ. ಆದರೆ ಹಿತ್ತಲ ಬಾಗಿಲು ಮೂಲಕ ಅಕ್ರಮವಾಗಿ ಭ್ರೂಣಹತ್ಯೆ ಕೆಲಸವನ್ನು ಎಗ್ಗಿಲ್ಲದೆ ನಡೆಸಿದ್ದಾರೆ ಎಂಬುದು ಬುಧವಾರ ಅಧಿಕಾರಿಗಳ ದಾಳಿಯಿಂದ ತಿಳಿದುಬಂದಿದೆ.

**ಇಲಾಖೆಗಳ ನಿರ್ಲಕ್ಷ್ಯ :**

2022ರಲ್ಲಿ ಮನೆಮೇಲೆ ದಾಳಿ ಮಾಡಿ, ಮುಖ್ಯದ್ವಾರಕ್ಕೆ ಶೀಲ್ ಮಾಡಿದ್ದರು ಸಹ, ಎರಡು ಮತ್ತು ಮೂರನೇ ಅಂತಸ್ಥಿನಲ್ಲಿ ವಾಸ ಹಾಗೂ ಕೆಳಮಹಡಿಯ ಹಿತ್ತಲ ಬಾಗಿಲು ಮೂಲಕ ಅಕ್ರಮ ಭ್ರೂಣಹತ್ಯೆ ಎಗ್ಗಿಲ್ಲದೆ ನಡೆದಿರುವದನ್ನು ನೋಡಿದರೆ ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಮತ್ತು ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ.

**ಭ್ರೂಣಹತ್ಯೆಗೆ ಸಾವಿರಾರು ಹಣ ವಸೂಲಿ :**

ಅಕ್ರಮ ಭ್ರೂಣ ಹತ್ಯೆಗಾಗಿ ಕವಿತಾ ಬಾಡನವರ ಅವರು ಕನಿಷ್ಠ 20 ಸಾವಿರದಿಂದ 80 ಸಾವಿರವರೆಗೆ ಹಣ ಪಡೆಯುತ್ತಿದ್ದರು ಎನ್ನಲಾಗಿದೆ. ಆರೋಪಿ ಕವಿತಾ ಅವರ ಪೋನ್ ಪೇ ನಂಬರಗೆ ಹಲವು ಗಣ್ಯ ವ್ಯಕ್ತಿ, ಅಧಿಕಾರಿಗಳಿಂದಲೂ ಸಾವಿರಾರು ರೂಪಾಯಿ ಜಮಾ ಆಗಿವೆ. ಪೋಲಿಸರು ಸೀಜ್ ಮಾಡಿರುವ ಕವಿತಾ ಬಾಡನವರ ಅವರ ಮೋಬೈಲ್‌ನಿಂದ ಮತ್ತಷ್ಟು ಜನರ ಹೆಸರು ಸದರಿ ಪ್ರಕರಣದಲ್ಲಿ ಸೇರಿಕೊಳ್ಳುವ ಸಾಧ್ಯತೆ ದಟ್ಟವಾಗಿದೆ ಎನ್ನಲಾಗಿದೆ. ಪೊಲೀಸ್ ಮೂಲಗಳ ಮಾಹಿತಿಯಂತೆ ಒಂದು ಗರ್ಭಪಾತ ಕೇಸ್‌ಗೆ ಮಿರಜ್‌ನಲ್ಲಿ ಸ್ಕ್ಯಾನಿಂಗ್ ಮಾಡುವ ವೈದ್ಯನಿಗೆ ಒಂದುವರೆ ಲಕ್ಷ, ಮಹಾಲಿಂಗಪುರದ ತನ್ನ ಮನೆಯಲ್ಲಿಯೇ ಗರ್ಭಪಾತ ಮಾಡುವ ಕವಿತಾಗೆ ಒಂದುವರೆ ಲಕ್ಷ ಹಣ ಪಡೆಯುತ್ತಿದ್ದಾರೆ ಎಂದು ತಿಳಿದು ಬಂದಿದೆ.

**ಅಕ್ರಮಕ್ಕೆ ಗಣ್ಯರ ಬೆಂಬಲದ ಶಂಕೆ? :**

ಕಳೆದ 8–10 ವರ್ಷಗಳಿಂದ ಕವಿತಾ ಬಾಡನವರ ತನ್ನ ಮನೆಯಲ್ಲಿಯೇ ಅಕ್ರಮವಾಗಿ ನಡೆಸುತ್ತಿದ್ದ ಭ್ರೂಣಹತ್ಯೆ ಅಕ್ರಮ ದಂದೆಯಿಂದ ಕೋಟ್ಯಾಂತರ ಬೆಲೆ ಬಾಳುವ ಮನೆಯನ್ನು ನಿರ್ಮಿಸಿದ್ದಾರೆ. ಇವರ ಅಕ್ರಮ ದಂಧೆಗೆ ಹಲವು ಗಣ್ಯರು ಹಾಗೂ ಇಲಾಖೆಯ ಕೆಲವು ಅಧಿಕಾರಿಗಳ ಬೆಂಬಲವಿದೆ ಎಂಬ ಅನುಮಾನ ಮೂಡುತ್ತಿದೆ. ಭ್ರೂಣಹತ್ಯೆ ಪ್ರಕರಣವು ಅಂತರರಾಜ್ಯಕ್ಕೆ ಹೋಗಿದ್ದರಿಂದ ಸಂಪೂರ್ಣ ವಿಚಾರಣೆಯ ನಂತರ ಪ್ರಕರಣವು ಯಾವ ಸ್ವರೂಪ ಪಡೆಯಲಿದೆ ಎಂಬುದನ್ನು ಕಾಯ್ದು ನೋಡಬೇಕಾಗಿದೆ.



1) ಮಹಾಲಿಂಗಪುರ: ಭ್ರೂಣಹತ್ಯೆ ಆರೋಪಿ ಕವಿತಾ ಬಾಡನವರ ಐಶಾರಾಮಿ ಮನೆ. 2) ಮಹಾಲಿಂಗಪುರ: ಭ್ರೂಣಹತ್ಯೆ ಆರೋಪಿ ಕವಿತಾ ಬಾಡನವರ ಮನೆಯಲ್ಲಿ ಅಧಿಕಾರಿಗಳಿಗೆ ಸಿಕ್ಕ ವೈದ್ಯಕೀಯ ಉಪಕರಣಗಳು ಹಾಗೂ ಔಷಧಿಗಳು. 3) ಮಹಾಲಿಂಗಪುರ: ಭ್ರೂಣಹತ್ಯೆ ಆರೋಪಿ ಕವಿತಾ ಬಾಡನವರ ಮನೆಯಲ್ಲಿನ ಗರ್ಭಪಾತ ಮಾಡಿಕೊಳ್ಳುವವರಿಗಾಗಿ ಹಾಕಿರುವ ಬೆಡ್‌ಗಳು. 4) ಮಹಾಲಿಂಗಪುರ: ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಪೋಲಿಸರಿಂದ ಕವಿತಾ ಬಾಡನವರ ಮನೆ ಮೇಲೆ ದಾಳಿ ನಡೆಸಿದರು.

# ವಿವಿಧ ಬೇಡಿಕೆ ಇಡೇರಿಕೆಗೆ ಆಗ್ರಹಿಸಿ ರೈತ ಸಂಘದಿಂದ ಮನವಿ



**ತಾಳಿಕೋಟೆ :** ತಾಲೂಕಿನ ಸಮಸ್ತ ರೈತರ ಅನೇಕ ಸಮಸ್ಯೆಗಳು ಈ ಕೆಳಗಿನಂತಿವೆ ಕೂಡಲೇ ಎಲ್ಲಾ ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳ ಜೊತೆ ಚರ್ಚಿಸಿ ಪರಿಹಾರ ಒದಗಿಸಬೇಕು ಮತ್ತು ತಾಲೂಕಿನ ಎಲ್ಲಾ ಅಧಿಕಾರಿಗಳೊಡನೆ ರೈತ ಮುಖರೊಂಡನೆ ಸಭೆ ಕರೆದು ಶಾಶ್ವತ ಪರಿಹಾರ ಒದಗಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ಪದಾಧಿಕಾರಿಗಳು ಶುಕ್ರವಾರರಂದು ತಹಶಿಲ್ದಾರರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಮುಂಗಾರು, ಹಿಂಗಾರು ಮಳೆ ಕೈ ಕೊಟ್ಟಿದ್ದ-ರಿಂದ ರೈತಾಪಿ ಜನರಿಗೆ ಸಂಪೂರ್ಣ ನಷ್ಟಗೊಂಡಿರುವ ಹಿನ್ನಲೆಯಲ್ಲಿ ವಿಫತ್ತು ನಿರ್ವಹಣಾ ಕಾನೂನಿನಡಿ ಪ್ರತಿ ಹೆಕ್ಟರಗೆ 8500 ರಾಜ್ಯ ಮತ್ತು 8500 ಕೇಂದ್ರದ ಪರಿಹಾರ ಗರಿಷ್ಟ 2 ಹೆಕ್ಟರಗೆ ಪರಿಹಾರ ಹಾಕಬೇಕು, ಆದರೆ ಕೇಂದ್ರ ಸರಕಾರ ನೀಡಿದ ಪರಿಹಾರದಲ್ಲಿಯೇ 2000 ಕಡಿತ ಮಾಡಿರುವುದು ಖಂಡನೀಯ, ಅದನ್ನು ಕೂಡಲೇ ರಾಜ್ಯ ಸರಕಾರ 2000+8500 ಸೇರಿಸಿ ಒಟ್ಟಾರೆ 10500 ರೈತರ ಪ್ರತಿ ಹೆಕ್ಟರಗೆ ಹಾಕಬೇಕು ಈ ಕುರಿತು ರೈತಾಪಿ ಜನರ ಹಕ್ಕೊತ್ತಾಯವನ್ನು ಸರ್ಕಾರ-ಕ್ಕೆ ಮನವಿ ಮಾಡಬೇಕು, ಬರಗಾಲ ಪರಿಹಾರ ಸಮೀಕ್ಷೆ ಸರಿಯಾಗಿ ಮಾಡದೇ, ಬೇಜಬ್ದಾರಿಯಿಂದ ಹೊರಗುತ್ತಿಗೆ ಮೂಲಕ ಮನಸ್ಸಿಗೆ ಬಂದ ಹಾಗೆ ಸರ್ವೇ ಮಾಡಿ ಕೈತೊಳೆದುಕೊಂಡಿದ್ದಾರೆ, ಆದರೆ ನಿಜವಾಗಿ ತಾಲೂಕಿನ ಎಲ್ಲಾ ನಷ್ಟಗೊಂಡ ರೈತರಿಗೆ ಪರಿಹಾರ ಒದಗಿಸಬೇಕು, ಅದನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿ ಆಗಿರುವ ಸಮಸ್ಯೆಯನ್ನು ಕೂಡಲೇ ಬಗೆಹರೆಸಿ ಎಲ್ಲಾ ರೈತರಿಗೂ ಪರಿಹಾರ ನೀಡಬೇಕು, ಮುಂಗಾರು ಕೆಲವೇ ದಿನಗಳಲ್ಲಿ ಪ್ರಾರಂಭವಾಗುತ್ತಿರುವುದರಿಂದ ತಾಲೂಕಿನ ರೈತ ಸಂಪರ್ಕ ಕೇಂದ್ರಗಳಲ್ಲಿ ಗುಣಮಟ್ಟದ, ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕ ಹಾಗೂ ಯಂತ್ರೋಪಕರಣಗಳನ್ನು ಅವಶ್ಯಕತೆಗೆ ಅನುಗುಣವಾಗಿ ಸಂಗ್ರಹಿಸಿಟ್ಟುಕೊಳ್ಳಬೇಕು, ಕಳಪೆ ಬೀಜ ಮಾರಾಟ ಮಾಡುವ ಅಂಗಡಿ-ಕಾರರ ವಿರೂದ್ಧ ಕಠಿಣ ಕ್ರಮ ಜರುಗಿಸಬೇಕು ಅವರ ಏಜೇನ್ಸಿಯನ್ನು ಸಂಪೂರ್ಣ ಅಮಾನ್ಯ ಮಾಡಬೇಕು, ಮುಂಗಾರು ಪ್ರಾರಂಭವಾಗುವ ಅಡಿಯಲ್ಲಿ ಎಲ್ಲಾ ರೈತರು ಜಮೀನುಗಳಿಗೆ ಹೋಗುವ ಮಾರ್ಗದಲ್ಲಿ ದಾರಿ ಹದಗೆಟ್ಟು, ಕಂಠಿ ಬೆಳೆದು ಸಾಕಷ್ಟು ಅನಾನುಕೂಲವಾಗುತ್ತಿವೆ, ಅವುಗಳನ್ನು ಕೂಡಾ ಸರಿಪಡಿಸಿ ಸ್ವಚ್ಛಗೊಳಿಸಬೇಕು, ಹಿಂದಿನ ಸರಕಾರ ವಿದ್ಯುತ್ ಇಲಾಖೆಯಡಿ ರೈತರಪಂಪಸೆಟಗಳಿಗೆ25000ಕೊಡುತ್ತಿತ್ತು, ಈಗ ನಿಲ್ಲಿಸಿದ್ದು ಈಗ ಸುಮಾರು 2 ಲಕ್ಷ ಹಣ ಕಟ್ಟುವಂತೆ ಹೇಳುತ್ತಿದ್ದಾರೆ. ಇದು ರೈತರು ಮತ್ತು ಕೃಷಿಯನ್ನು ದೀವಾಳಿ ಎಬ್ಬಿಸುವ ಯೋಜನೆ ಆಗಿದೆ ಅದು ಕೂಡಾ ನಿಲ್ಲಬೇಕು, ತಾಲೂಕಿನಾಧ್ಯಾಂತ ಅನೇಕ ತೋಟದ ವಸ್ತಿಯಿದ್ದು, ಅಲ್ಲಿ ರಾತ್ರಿ ಸಿಂಗಲ್‌ಫೇಸ್ ವಿದ್ಯುತ್ ಕೊಡಬೇಕೆನ್ನುವುದು ಎಲ್ಲರ ಬೇಡಿಕೆಯಾಗಿದೆ. ರಾತ್ರಿ ಹೊತ್ತು ರೈತರ ಮಕ್ಕಳಿಗೆ ಅಭ್ಯಾಸ ಮಾಡಲು, ಮತ್ತು ರೈತರು ಧನಕರುಗಳಿಗೆ ಮೇವು ಹಾಕಲು ಹೋದಾಗ ಹುಳಹುಪ್ಪಡಿಗಳು ಕಡಿದು ಸಾವುಗಳು ಸಂಭವಿಸಿರುವುದು ಇದೆ, ಕಾರಣ ರಾತ್ರಿ ಸಿಂಗಲ್ ಫೇಸ್ ನೀಡಬೇಕು, ಫಸಲ್ ಭೀಮಾ ಯೋಜನೆಯಡಿ ಸಾಕಷ್ಟು ಮೋಸ ಆಗುತ್ತಿದ್ದು, ಅದನ್ನು ಕೂಡಲೇ ಪರಿಶಿಲಿಸಿ ನಷ್ಟಗೊಂಡ ರೈತರಿಗೆ ಕೆಲವೊಬ್ಬರಿಗೆ ವಿಮೆ ಬಂದಿರುತ್ತದೆ, ಬಹಳ ರೈತರಿಗೆ ಪರಿಹಾರ ಬಂದಿರುವುದಿಲ್ಲ, ನಷ್ಟಗೊಂಡ ಎಲ್ಲಾ ರೈತರಿಗೂ ಪರಿಹಾರ ಒದಗಿಸುವಂತಹ ಕಾರ್ಯ ಮಾಡಬೇಕು ಈ ಕುರಿತು 15 ದಿನಗಳೊಳಗಾಗಿ ಸಮರ್ಪಕವಾದ ಸೂಕ್ತ ಕ್ರಮದ ಉತ್ತರ ಬಾರದಿದ್ದರೆ ತಹಶಿಲ್ದಾರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಸಲ್ಲಿಸಿದ ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಮನವಿ ಪತ್ರವನ್ನು ರೈತ ಸಂಘದ ಪದಾಧಿಕಾರಿಗಳು ತಹಶಿಲ್ದಾರ ಕಚೇರಿ ಸಿಬ್ಬಂದಿ ಬಾಬಾನಗರ ಅವರಿಗೆ ಸಲ್ಲಿಸಿದರು. ಈ ಸಮಯದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ಜಿಲ್ಲಾ ಅಧ್ಯಕ್ಷ ಸಂಗಮೇಶ ಸಗರ, ತಾಲೂಕಾ ಅಧ್ಯಕ್ಷ ಶ್ರೀಶೈಲ ವಾಲಿಕಾರ, ಹಣಮಂತ ವಡ್ಡರ, ಕಲಕೇರಿ ಹೋಬಳಿ ಅಧ್ಯಕ್ಷ ಮಹಿಬೂಬಬಾಷಾ ಮನಗೂಳಿ, ಖಾಜಾಹುಸೇನ ಚೌದ್ರಿ, ಗೌಡಪ್ಪಗೌಡ ಹಳಿಮನಿ, ಮೈಹಿಬೂಬ ಗೊಬರಡಗಿ, ವೆಂಕಣ್ಣ ಗುತ್ಯಾಳ, ರಫೀಕ್ ಮುಲ್ಲಾ, ಮೊದಲಾದವರು ಇದ್ದರು.

# ಮುಂಗಾರು ಹಂಗಾಮಿನ ಬೆಳೆ ವಿಮೆಗೆ ನೋಂದಾಯಿಸಲು ರೈತರಿಗೆ ಸೂಚನೆ

**ಕೊಪ್ಪಳ :** 2024-25 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಬೆಳೆವಿಮೆಗೆ ನೋಂದಾವಣೆ ಪ್ರಕ್ರಿಯೆ ಆರಂಭಗೊಂಡಿದೆ.

ಕೃಷಿ ಇಲಾಖೆ ಅಧಿಕಾರಿಗಳು, ಬ್ಯಾಂಕ್ ಸಿಬ್ಬಂದಿ ಮತ್ತು ಟಾಟಾ ಎ.ಐ.ಜಿ ಕಂಪನಿಯ ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿಗಳು ಸಭೆ ಜರುಗಿಸಿ ಪ್ರಸಕ್ತ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ನೋಂದಾವಣೆ ಮಾಡುವಂತೆ ಹಾಗೂ ಇನ್ಸೂರೆನ್ಸ್ ಕಂಪನಿಯ ಪ್ರತಿನಿಧಿಗಳಿಗೆ ಹೋಬಳಿ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಮ್ಮ ಕಛೇರಿಯನ್ನು ತೆರೆದು ರೈತರಿಗೆ ಬೆಳೆವಿಮೆ ನೋಂದಾವಣೆಯಲ್ಲಿ ಸಹಾಯ ಮಾಡುವಂತೆ ಸೂಚಿಸಿದ್ದಾರೆ.

ಅಧಿಸೂಚಿತ ಬೆಳೆಗಳಾದ ಹತ್ತಿ (ನೀರಾವರಿ) ಮತ್ತು ಹೆಸರು (ಮಳೆಯಾಶ್ರಿತ) ಬೆಳೆಗಳಿಗೆ ನೋಂದಾಯಿಸಲು ಜುಲೈ 15 ಕೊನೆಯ ದಿನವಾಗಿದೆ. ಇತರೆ ಅಧಿಸೂಚಿತ ಎಲ್ಲಾ ಬೆಳೆಗಳಿಗೆ ನೋಂದಾಯಿಸಲು ಜುಲೈ 31 ಕೊನೆಯ ದಿನವಾಗಿದೆ. ಆದ್ದರಿಂದ ರೈತರು ಬೆಳೆವಿಮೆ ನೋಂದಾಯಿಸಿ ಬೆಳೆವಿಮೆ ಪರಿಹಾರ ಲಾಭ ಪಡೆಯಲು ಈ ಮೂಲಕ ಕೋರಲಾಗಿದೆ. ರೈತರು ಕಡ್ಡಾಯವಾಗಿ ಫ್ರೂಟ್ಸ್ ಐಡಿಯನ್ನು ಹೊಂದಿರಬೇಕು. ರೈತರು ಬಿತ್ತನೆ ಮಾಡುವ ಬೆಳೆಯನ್ನೇ ನೋಂದಾಯಿಸಬೇಕು ಮತ್ತು ತಮ್ಮ ಬೆಳೆಯನ್ನು ತಾವೇ ಖುದ್ದಾಗಿ ಬೆಳೆ ಸಮೀಕ್ಷೆಯನ್ನು ಮಾಡಬೇಕು.

ಗಂಗಾವತಿ ತಾಲ್ಲೂಕಿನ ಗ್ರಾಮ ಪಂಚಾಯತಿ ಮಟ್ಟದಲ್ಲಿ ಭತ್ತ(ನೀರಾವರಿ), ಕೊಪ್ಪಳ ಮತ್ತು ಕುಷ್ಟಗಿ ತಾಲ್ಲೂಕಿನ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮುಸಕಿನ ಜೋಳ(ಮಳೆಯಾಶ್ರಿತ), ಸಜ್ಜೆ(ಮಳೆಯಾಶ್ರಿತ) ಹಾಗೂ ಯಲಬುರ್ಗಾ ತಾಲ್ಲೂಕಿನ ಗ್ರಾಮ ಪಂಚಾಯತಿ ಮಟ್ಟದಲ್ಲಿ ಹೆಸರು(ಮಳೆಯಾಶ್ರಿತ), ಮುಸುಕಿನಜೋಳ(ಮಳೆಯಾಶ್ರಿತ) ಬೆಳೆಗಳನ್ನು ಅಧಿಸೂಚಿತ ಬೆಳೆಗಳೆಂದು ಘೋಷಿಸಲಾಗಿದೆ.

ಹೋಬಳಿ ಮಟ್ಟದಲ್ಲಿ ಭತ್ತ (ಮಳೆಯಾಶ್ರಿತ/ನೀರಾವರಿ), ಜೋಳ (ಮಳೆಯಾಶ್ರಿತ/ನೀರಾವರಿ), ಮುಸಕಿನ ಜೋಳ(ಮಳೆಯಾಶ್ರಿತ/ನೀರಾವರಿ), ಸಜ್ಜೆ (ಮಳೆಯಾಶ್ರಿತ/ನೀರಾವರಿ), ಸೂರ್ಯಕಾಂತಿ (ಮಳೆಯಾಶ್ರಿತ/ನೀರಾವರಿ), ಅಲಸಂದಿ (ಮಳೆಯಾಶ್ರಿತ), ನವಣೆ (ಮಳೆಯಾಶ್ರಿತ), ತೊಗರಿ(ಮಳೆಯಾಶ್ರಿತ/ನೀರಾವರಿ), ಹೆಸರು (ಮಳೆಯಾಶ್ರಿತ), ಹುರಳಿ (ಮಳೆಯಾಶ್ರಿತ), ಎಳ್ಳು (ಮಳೆಯಾಶ್ರಿತ), ನೆಲಗಡಲೆ (ಶೇಂಗಾ) (ಮಳೆಯಾಶ್ರಿತ/ನೀರಾವರಿ), ಹತ್ತಿ (ಮಳೆಯಾಶ್ರಿತ/ನೀರಾವರಿ), ಈರುಳ್ಳಿ (ನೀರಾವರಿ/ಮಳೆಯಾಶ್ರಿತ), ಟಮೆಟೊ ಬೆಳೆಗಳನ್ನು ಅಧಿಸೂಚಿತ ಬೆಳೆಗಳೆಂದು ಘೋಷಿಸಲಾಗಿದೆ. ಪ್ರಸಕ್ತ ಸಾಲಿಗೆ ಟಾಟಾ ಎಐಜಿ ಇನ್ಸೂರೆನ್ಸ್ ಕೋ.ಲಿಮಿಟೆಡ್ ವಿಮಾ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ. ರೈತರು ಹೆಚ್ಚಿನ ಮಾಹಿತಿಗಾಗಿ ಇನ್ಸೂರೆನ್ಸ್ ಕಂಪನಿಯ ಪ್ರತಿನಿಧಿ/ಹತ್ತಿರದ ರೈತ ಸಂಪರ್ಕ ಕೇಂದ್ರ/ಸಾಮಾನ್ಯ ಸೇವಾ ಕೇಂದ್ರ/ಗ್ರಾಮ್ ಒನ್/ ಸಂಬಂಧಪಟ್ಟ ಬ್ಯಾಂಕ್ ಶಾಖೆ ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಾಗ್ರತಿ ಮೂಡಿಸುವುದೇ ದಿನಾಚರಣೆಗಳ ಉದ್ದೇಶ. ನರಸೀಂಹ ಗಲಗಲಿ

# ಚಿಮ್ಮಡದಲ್ಲಿ ಡೆಂಗ್ಯೂ ದಿನಾಚರಣೆ



**ಚಿಮ್ಮಡ :** ವಿಶ್ವ ಆರೋಗ್ಯ ಸಂಸ್ಥೆಯವರ ಮಾರ್ಗದರ್ಶನದಲ್ಲಿ ಕಾಲಕಾಲಕ್ಕೆ ಆಚರಿಸಲಾಗುವ ಮಲೇರಿಯಾ, ಡೆಂಗ್ಯೂ, ದಿನಾಚರಣೆಗಳು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಚರಿಸಲಾಗುತ್ತದೆ ಎಂದು ತಾಲೂಕಾ ವ್ಹಿಬಿಡಿ ಮೇಲ್ವಿಚಾರಕ ನರಸಿಂಹ ಗಲಗಲಿ ಹೇಳಿದರು.

ಸ್ಥಳಿಯ ಗ್ರಾಮ ಪಂಚಾಯತಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಡೆಂಗ್ಯೂ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಆಗಮಿಸಿ ಮಾತನಾಡಿದ ಅವರು ಮಳೆಗಾಲದಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿ ಹೆಚ್ಚಾಗಿರುತ್ತದೆ ಅದರಿಂದ ಡೆಂಗ್ಯೂ, ಮಲೇರಿಯ, ಚಿಕುನ್‌ಗುನ್ಯಾ, ಮೆದುಳು ಜ್ವರ, ಆನೆಕಾಲಿನರೋಗ ಸೇರಿದಂತೆ ಹಲವು ರೋಗಗಳು ಹರಡುವ ಸಾಧ್ಯತೆ ಹೆಚ್ಚಿರುತ್ತದೆ ಅದಕ್ಕೆ ಗಲೀಜು ನೀರು ಸಂಗ್ರಹವಾಗಿ ಸೊಳ್ಳೆಗಳು ಉತ್ಪತ್ತಿಯಾಗದಂತೆ ಮನೆ, ಅಂಗಳಗಳನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳಬೇಕು ಎಂದರು.

ಸ್ಥಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ; ಕೆ.ಎಸ್. ತಳ್ಳಿ ಮಾತನಾಡಿ ಖಾಯಿಲೆ ಬಂದಮೇಲೆ ಚಿಕಿತ್ಸೆಗೆ ಪರದಾಡುವುದಕ್ಕಿಂತ ಖಾಯಿಲೆ ಬಾರದಂತೆ ಮುನ್ನೆಚ್ಚರಿಕೆ ವಹಿಸುವುದೇ ಜಾಣ ನಡೆಯಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ಬಿ.ಸಣ್ಣಕ್ಕಿ, ಸಾಂಕ್ರಾಮಿಕ ರೋಗಗಳ ತಜ್ಞಡಾ; ಭಾಗ್ಯವಂತ ಪಿಎಚ್‌ಸಿ ಮೇಲ್ವಿಚಾರಕ ಜಿ.ಎಸ್. ಮುಸಳಿ, ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ ವಹಿಸಿದ್ದರು. ಉಪಾಧ್ಯಕ್ಷೆ ಶ್ರೀಮತಿ ಪ್ರೇಮಾ ಪ್ರಭು ಗೋವಿಂದಗೋಳ, ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪುಜಾರಿ, ಆನಂದ ಕವಟಿ, ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಮನೋಜ ಹಟ್ಟಿ, ಬಾಳೇಶ ಬ್ಯಾಕೋಡ, ಅಶೋಕ ಧಡೂತಿ, ರಮೇಶ ಮೇತ್ರಿ, ನಾಗಪ್ಪಾ ಆಲಕನೂರ, ಶ್ರೀಮತಿ ಮೇಘಾ ಗಾಣಿಗೇರ, ಶ್ರೀಮತಿ ಬಂಗಾರೆವ್ವ ಜಾಲಿಕಟ್ಟಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರ ಸಿಆರ್‌ಪಿ ಸಮನ್ವಯ ಅಧಿಕಾರಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.

# ಜಗದೀಶ ಸಾಲಳ್ಳಿಗೆ ಗೌರವ ಪ್ರಶಸ್ತಿ



**ವಿಜಯಪುರ :** ಶಿರಸಿಯ ನೆಮ್ಮದಿ ಆವರಣದ ರಂಗಧಾಮದಲ್ಲಿ ಇತ್ತೀಚೆಗೆ ಜರುಗಿದ ರಾಜ್ಯಮಟ್ಟದ ಹನ್ನೆರಡನೇ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಚುಟುಕು ಸಾಹಿತ್ಯ, ಸಾಹಿತಿಗಳು ಹಾಗೂ ಕನ್ನಡ ಸಾಹಿತ್ಯ ಬೆಳೆಸಲು ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಮಸೂತಿ ಗ್ರಾಮದ ವಿಜಯಪುರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಗದೀಶ್ವರ ಸಾಲಳ್ಳಿಯವರಿಗೆ 'ಚುಟುಕು ದಾಸೋಹಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಮ್ಮೇಳನದ ಸರ್ವಾಧ್ಯಕ್ಷ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಹುಬ್ಬಳ್ಳಿಯ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಪ್ರಸಾರಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡ ಶೆಟ್ರು, ಶಿರಸಿ ಶೈಕ್ಷಣಿಕ ಜಿಲ್ಲಾಧ್ಯಕ್ಷ ಮನೋಹರ ಮೇಲ್ಮನೆ, ಶಿರಸಿ ಜಿಲ್ಲಾ ಸಾಹಿತ್ಯ ಸಂಚಲನಾಧ್ಯಕ್ಷ ಕೃಷ್ಣ ದತ್ತಾತ್ರೇಯ ಪದಕಿ, ಜಿಲ್ಲಾಧ್ಯಕ್ಷ ಜಿ. ಯು. ನಾಯ್ಕ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

# ಭೂ-ಮಾಫಿಯಾ ಮಟ್ಟ ಹಾಕಲು ಮಾಜಿ ಸಚಿವ ಪಟ್ಟಣಶೆಟ್ಟಿ ಆಗ್ರಹ




**ವಿಜಯಪುರ :** ನಗರದಲ್ಲಿ ನಕಲಿ ಭೂ ದಾಖಲೆ ಸೃಷ್ಟಿಸಿ ಜನರನ್ನು ವಂಚಿಸುತ್ತಿರುವ ಭೂ-ಮಾಫಿಯಾವನ್ನು ಸಂಪೂರ್ಣವಾಗಿ ಮಟ್ಟ ಹಾಕಬೇಕೆಂದು ಮಾಜಿ ಸಚಿವ ಅಪ್ಪಾಸಾಹೇಬ(ಅಪ್ಪು) ಮ. ಪಟ್ಟಣಶೆಟ್ಟಿ ಆಗ್ರಹಿಸಿದ್ದಾರೆ.

ಈ ಕುರಿತು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಬೇಟಿ ಮಾಡಿ ಮನವಿ ಮಾಡಿದ ಅವರು, ನಗರದಲ್ಲಿ ನಕಲಿ ಭೂ-ದಾಖಲೆ ಸೃಷ್ಟಿ ಮಾಡಿ ಜನರನ್ನು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡುತ್ತಿರುವ ಅನೇಕ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಬಡಜನರು ನಿತ್ಯ ಶೋಷಣೆಗೊಳಗಾಗುತ್ತಿದ್ದಾರೆ. ಜಮೀನು ಹಾಗೂ ನಿವೇಶನಗಳ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಉಪನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಖರೀದಿ ಹಾಗೂ ಮಾರಾಟ ಮಾಡುವ ಕಾನೂನು ಬಾಹಿರ ಕೃತ್ಯಗಳು ಅವ್ಯಾಹತವಾಗಿ ನಡೆದಿವೆ. ಜನರನ್ನು ವಂಚಿಸುವ ವ್ಯವಸ್ಥಿತ ಜಾಲವೇ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ.

ಈ ಜಾಲಕ್ಕೆ ಈಗಾಗಲೇ ನೂರಾರು ಜನ ಹಣ-ಆಸ್ತಿ ಕಳೆದುಕೊಂಡಿದ್ದಾರೆ. ಇಂತಹ ವಂಚಕರ ಜಾಲ ವಿಜಯಪುರ ಜಿಲ್ಲೆ ಹಾಗೂ ನಗರದಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಸಾಕಷ್ಟು ಬಡ ಜನರು ಈಗಾಗಲೇ ಮೋಸ ಹೋಗಿದ್ದಾರೆ. ಕಷ್ಟಪಟ್ಟು ದುಡಿದು, ಸಾಲ-ಸೋಲ ಮಾಡಿ ನಿವೇಶನ, ಜಮೀನು ಖರೀದಿ ಮಾಡುವ ಬಡವರು, ಈ ರೀತಿಯ ವಂಚನೆಗೆ ಒಳಗಾಗಿ ತಮ್ಮ ಆಸ್ತಿ ಕಳೆದುಕೊಂಡು ಕಷ್ಟ ಅನುಭವಿಸುತ್ತಿದ್ದಾರೆ.

ಈ ಜಾಲಕ್ಕೆ ಸಿಲುಕಿ ವಂಚನೆಗೊಳಗಾದವರು ಹಾಗೂ ಜಮೀನು ಕಳೆದುಕೊಂಡವರು ಪೊಲೀಸ್ ಠಾಣೆಗೆ ದೂರು ನೀಡಿದರೂ ಯಾವ ಪ್ರಯೋಜನವೂ ಆಗುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ ನೊಂದ ಬಡವರಿಗೆ ನ್ಯಾಯ ದೊರಕುತ್ತಿಲ್ಲ. ಬಡಜನರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಇಂತಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತನಿಖೆ ಮಾಡಲು ವಿಶೇಷ ತನಿಖಾ ತಂಡ ರಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಕೂಡಲೇ ಈ ರೀತಿಯ ಪ್ರಕರಣಗಳನ್ನು ಬೇಧಿಸಿ ಮೂಲ ಮಾಲೀಕರಿಗೆ ಅವರ ಜಮೀನು-ನಿವೇಶನ ಪುನ: ಹಂಚಿಕೆಯಾಗುವ ನಿಟ್ಟಿನಲ್ಲಿ ವಿಶೇಷ ಕಾರ್ಯಾಚರಣೆ ಮಾಡಬೇಕು. ಜಿಲ್ಲೆಯಲ್ಲಿ ಈ ರೀತಿಯ ಭೂ ಮಾಫಿಯಾವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಪಟ್ಟಣಶೆಟ್ಟಿ ಆಗ್ರಹಿಸಿದರು.

# ರೈತರ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದು, ಕಳಪೆ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ರೈತ ಸಂಘದ ಆಗ್ರಹ



**ವಿಜಯಪುರ :** ರೈತರ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಜಿಲ್ಲೆಯ ಸಣ್ಣ ಸಣ್ಣ ಹೊಟೆಲ, ಕಿರಾಣಿ ಅಂಗಡಿ, ಝುರಾಕ್ಸ್ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ, ಇದನ್ನು ತಡೆಯಬೇಕಿದ್ದ ಅಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ, ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂದು ಕರ್ನಾಟ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿಸಲ್ಲಿಸಿಅಂತವರವಿರುದ್ಧಕಠಿಣಕಾನೂನುಕ್ರಮ ಕೈಗೊಂಡು ಅವರ ಪರವಾನಿಗೆಯನ್ನು ಶಾಶ್ವತವಾಗಿ ರದ್ದು ಮಾಡಬೇಕೆಂದು ಆಗ್ರಹಿಸಿದರು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜಾಗೃತಿದಳ ಹೆಚ್ಚಿಗೆ ಮಾಡಿ, ಪ್ರತಿ ತಾಲೂಕಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಹಾಗೂ ಇಲಾಖೆಯ ಪರವಾನಿಗೆ ಪಡೆಯದೇ (ಪಿ.ಸಿ) ಅನಧಿಕೃತ ಮತ್ತು ಕಳಪೆ ಗುಣಮಟ್ಟದ ಬೀಜ, ರಸಗೊಬ್ಬರ, ಕೀಟನಾಶಕ ಮಾರಾಟ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು, ಇದರಿಂದ ಮುಗ್ದ ರೈತರು ಅನ್ಯಾಯಕ್ಕೊಳಗಾಗಿ ಸಾಲದ ಬಾಧೆಯಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪುತ್ತದೆ. ಅನಧಿಕೃತ ಟಾನಿಕ ಹೆಸರಿನಲ್ಲಿ ಬಯೋ ಎಂಭ ಹೆಸರಿನಲ್ಲಿ ವಿಷವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದೆ, ಅವುಗಳನ್ನು ತಜ್ಞರಿಂದ(ಲ್ಯಾಬ್‌ಟೆಸ್ಟ್)ತಪಾಸಣೆಮಾಡಿ,ರೈತರಿಗೂ ಹಾಗೂ ಸರಕಾರಕ್ಕೂ ಆಗುತ್ತಿರುವ ಮೊಸವನ್ನು ತಡೆಯಬೇಕು ಎಂದರು

ತಾಲೂಕಾ ಅಧ್ಯಕ್ಷರಾದ ಮಹದೇವಪ್ಪ ತೇಲಿ ಅವರು ಮಾತನಾಡುತ್ತಾ ರೈತಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಕೊಡುವ ತಾಡಪಾಲ, ಸ್ಪಿಂಕಲರ್ ಪೈಪ್, ಸ್ಪ್ರೇ ಪಂಪ್‌ಗಳು ಅಷ್ಟು ಹೇಳಿಕೊಳ್ಳುವಂತಹ ಗುಣಮಟ್ಟದಿಂದ ಕೂಡಿಲ್ಲ, ಅಧಿಕಾರಿಗಳಿಗೆ ಕೇಳಿದರೆ ನಮಗೆ ಗೊತ್ತಿಲ್ಲ, ಮೇಲಿನಿಂದ ಹೀಗೆ ಬಂದಿವೆ ನಾವೇನು ಮಾಡುವುದು ಎನ್ನುತ್ತಿದ್ದಾರೆ, ಆದ್ದರಿಂದ ಒಟ್ಟಾರೆಯಾಗಿ ರೈತರಿಗೆ ಅನ್ಯಾಯವಾಗದ ಹಾಗೆ ಸರಿಯಾಗಿ ಗುಣಮಟ್ಟದ ವಸ್ತುಗಳನ್ನು ಕೊಡಿ, ಯಾಕೆಂದರೆ ಒಮ್ಮೆ ಸರಕಾರದ ಯೋಜನೆ ಪಡೆದರೆ 7 ವರ್ಷ ಮತ್ತೆ ತೆಗೆದುಕೊಳ್ಳಲು ಬರುವುದಿಲ್ಲ ಅಂತಾರೆ ಎಂದರು. ಈ ವೇಳೆ ತಾ. ಉಪಾಧ್ಯಕ್ಷರಾದ ಪ್ರಕಾಶ ತೇಲಿ , ಆಹೇರಿ ಗ್ರಾ.ಪಂ ಮಮಾಜಿ ಅರ್ಧಕ್ಷರಾದ ಬಸವರಾಜಗಾಣಗೇರ, ರಾಮಸಿಂಗರಜಪೂತ ಬಸವರಾಜಹಡಪದ, ಅಶೋಕಕನ್ನೂರ ,ರಾಜಾರಾಮಸಿಂಗ ಕೊಳುರ, ಬಸವರಾಜ ಗುದಳೆ, ರವಿ ಗೆರಡೆ, ಶ್ರೀಶೈಲ ಮಸೂತಿ, ರಾಜು ಕೇರೂರ, ಬಸವರಾಜ ಮಸೂತಿ, ರಾಜಾರಾಮಸಿಂಗ ಡೊಣೂರ, ಹಣಮಂತ ಶೆಗಣೂಶಿ, ಪರಸು ಚಿಕ್ಕಲಕಿ, ಬಸವರಾಜ ಕಲ್ಬುರ್ಗಿ, ಮಲುಕು ಅಕ್ಕಿಹುಗ್ಗಿ, ಮಲ್ಲನಗೌಡ ಬಿರಾದಾರ, ಸೋಮಯ್ಯ ದೊಡಮನಿ, ಮಹಾಂತೇಶಹತ್ತರಕಿ, ಭೀಮು ಚಿಮ್ಮಲಗಿ, ಮಹಾಂತೇಶ ಗೆರಡೆ ಸೇರಿದಂತೆ ಇತರರು ಇದ್ದರು.

# ವಿದೇಶದಲ್ಲಿ ಮಹೇಶ ಬಡಿಗೇರರ ಕಲಾಕೃತಿ ಪ್ರದರ್ಶನ





**ಬಾದಾಮಿ :** ಮೇ 16 ರಿಂದ ಜೂ. 6 ವರೆಗೆ ಅಂತರಾಷ್ಟ್ರೀಯ ಸಮೂಹ ಚಿತ್ರಕಲಾ ಪ್ರದರ್ಶನವನ್ನು ರಿಪಬ್ಲಿಕ್ ಡೊಮಿನಿಕನ್ ದೇಶದ ಸ್ಯಾಂಟೋ ಡೋಮಿಂಗೊ ನಗರದಲ್ಲಿ ಸೀಲೂ ಆರ್ಟ್ ಫೌಂಡೇಶನ್‌ವತಿಯಿಂದ ಆಯೋಜಿಸಲಾಗಿದೆ. ಈ ಪ್ರದರ್ಶನಕ್ಕಾಗಿ ವಿಶ್ವದ 39 ವಿವಿಧ ದೇಶದ ಕಲಾವಿದರನ್ನು ಆಯ್ಕೆ ಮಾಡಿ ಅವರ ಕಲಾಕೃತಿಗಳ ಪ್ರದರ್ಶನವನ್ನು ನಡೆಸಲಾಗುತ್ತಿದೆ. ಇದರಲ್ಲಿ ನಮ್ಮ ನಾಡಿನ ಯುವ ಕಲಾವಿದ ಮಹೇಶ ಮನೋಹರ ಬಡಿಗೇರ ಅವರು ರಚಿಸಿದ ಚಿತ್ರ ಕಲಾಕೃತಿಯು ಆಯ್ಕೆಯಾಗಿರುವುದು ನಮ್ಮ ನಾಡಿಗೆ ಹಾಗೂ ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಬದಾಮಿ ಕೇಂದ್ರ-ಬನಶಂಕರಿ ವಿಭಾಗಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಕಲಾವಿದರ ಸಂಕ್ಷಿಪ್ತ ಪರಿಚಯ: ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿನ ಬೂದಿಹಾಳ (ಎಸ್.ಜೆ) ಗ್ರಾಮದಲ್ಲಿ ಅಕ್ಟೋಬರ್ 8 1996 ರಂದು ಮನೋಹರ ಹಾಗೂ ಶಕುಂತಲಾ ಎಂಬ ದಂಪತಿಗಳಿಗೆ ಎರಡನೆಯ ಮಗನಾಗಿ ಮಹೇಶ ಬಡಿಗೇರ ಅವರು ಜನಿಸಿ. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಸ್ವಗ್ರಾಮದಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ಕಾತರಕಿ ಹಾಗೂ ಪ್ರೌಢ ಶಾಲಾ ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಪಡೆದಿದ್ದಾರೆ. ಬಾಲ್ಯದಿಂದಲೆ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿರುವುದರಿಂದ ಇವರ ಮುಂದಿನ ಶಿಕ್ಷಣವನ್ನು ಕಲಾ ಕ್ಷೇತ್ರದಲ್ಲಿ ಆರಂಭಿಸುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯದ ಬಾದಾಮಿ ಕೇಂದ್ರದ-ಬನಶಂಕರಿಯಲ್ಲಿ ಬಿ.ವಿ.ಎ ಚಿತ್ರಕಲೆಗೆ ಪ್ರವೇಶವನ್ನು ಪಡೆಯುತ್ತಾರೆ. ಇಲ್ಲಿಯ ಅಧ್ಯಾಪಕರು ಸಾಂಪ್ರದಾಯಕ ಕಲೆಯ ಜೊತೆಗೆ ಸೃಜನಾತ್ಮಕ ಸಂಯೋಜನಾ ಕಲೆಯ ವಿವಿಧ ರೂಪಗಳಲ್ಲಿ ಕಲಾಕೃತಿಗಳ ಮಾರ್ಗದರ್ಶನ ಇವರಿಗೆ ದೊರೆಯಿತು.

ಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ ಈ ಯುವ ಕಲಾವಿದ ಬನಶಂಕರಿ ಚಿತ್ರಕಲೆ ಕಲಾಶಾಲೆಯಲ್ಲಿ ಬಿ.ವಿ.ಎ ಸ್ನಾತಕ ಪದವಿ ಹಂತದಲ್ಲಿ ಇರುವಾಗಲೇ ಇವರು ರಚಿಸಿದ ಅನೇಕ ಕಲಾಕೃತಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಕಲಾ ಪ್ರದರ್ಶನಕ್ಕೆ ಆಯ್ಕೆಯಾಗಿ ಎಲ್ಲರ ಗಮನವನ್ನು ಸೆಳೆದಿವೆ. ಮುಂದೆ ಇವರು ಉನ್ನತವಾದ ಕಲಾ ಶಿಕ್ಷಣವನ್ನು ಪಡೆಯಲು ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ 2021ರಲ್ಲಿ ಪ್ರವೇಶವನ್ನು ಪಡೆದರು.

ಅಧ್ಯಾಪಕರಿಂದ ಸಮಕಾಲಿನ ಸೃಜನಾತ್ಮಕವಾದ ಕಲಾ ಬೋಧನೆಯ ಶಿಕ್ಷಣವು ಈ ಕಲಾವಿದರಿಗೆ ಲಭಿಸಿದ್ದು. ಸತತ ಪ್ರಯತ್ನದ ಫಲವಾಗಿ ಮಹೇಶ ಬಡಿಗೇರ ಅವರಿಗೆ ತನ್ನ ಕಲಾಕೃತಿ ರಚನೆಗೆ ವಿಭಿನ್ನವಾದ ದಿಕ್ಕನ್ನು ತಾವೇ ಕಂಡುಕೊಂಡಿದ್ದಾರೆ. ಈ ರೀತಿಯಾಗಿ ತಮ್ಮ ಸ್ವಂತ ಶೈಲಿಯಲ್ಲಿ ಹಲವಾರು ಕೃತಿಗಳನ್ನು ರಚಿಸಿ ರಾಜ್ಯದ ವಿವಿಧ ಸ್ಥಳಗಳಲ್ಲಿನ ಕಲಾ ಗ್ಯಾಲರಿಯಲ್ಲಿ ವಿಶೇಷ ಸಂದರ್ಭಗಳಲ್ಲಿ ಪ್ರದರ್ಶನವನ್ನು ಮಾಡುತ್ತಾ ಬಂದಿದ್ದಾರೆ. ಮುಂದೆ ಇವರ ಕಲಾಕೃತಿಗಳು ರಾಜ್ಯ ವ್ಯಾಪ್ತಿ ಮತ್ತು ದೇಶದಿಂದ ವಿದೇಶಗಳ ಗಡಿಭಾಗವನ್ನು ಸಲಿಸಾಗಿ ತಲುಪಿದವು. ಟರ್ಕಿ, ಅಮೇರಿಕಾ, ಮೆಕ್ಸಿಕೋ, ಉಕ್ರೇನ್, ಅರ್ಜೆಂಟೈನಾ, ಸ್ಪೇನ್, ಬ್ರೇಜಿಲ್ ದೇಶಗಳಲ್ಲಿ ಕಲಾಕೃತಿಗಳು ಪ್ರದರ್ಶನಗೊಂಡು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅಲ್ಲದೆ ವಿಶೇಷವಾಗಿ ಮಹಿಳೆಯರು ಬಳಸುವ ವೇನಿಟಿ ಬ್ಯಾಗ್, ಟೀ-ಶರ್ಟ್ ವಸ್ತ್ರವಿನ್ಯಾಸ ಹಾಗೂ ಪುಸ್ತಕಗಳಲ್ಲಿ ಇವರ ಕಲಾಕೃತಿಗಳು ಮುದ್ರಣವಾಗಿವೆ. ಇನ್ನೊಂದು ವಿಶೇಷವೆಂದರೆ ಮೇ 10 ರಿಂದ 30 ವರೆಗೆ ಟರ್ಕಿ ದೇಶದಲ್ಲಿಇವರ ಗುಂಪು ಕಲಾ ಪ್ರದರ್ಶನ ನಡೆದಿರುವುದು ಪ್ರಶಂಸನಿಯ. ಇಂತಹ ಸೃಜನಶೀಲ ಕಲಾವಿದರ ಪ್ರಸ್ತುತ ಕಲಾಕೃತಿಯು ರಿಪಬ್ಲಿಕ್ ಡೊಮಿನಿಕನ್ ದೇಶದಲ್ಲಿ ನಡೆದ ಪ್ರದರ್ಶನಕ್ಕೆ ಆಯ್ಕೆಯಾಗಿದ್ದು ತುಂಬಾ ಹೆಮ್ಮೆಯ ಸಂಗತಿಯಾಗಿದೆ.

ಕೃತಿಗಳ ವಸ್ತು-ವಿಷಯ: ಸಾಮಾನ್ಯವಾಗಿ ಇವರಕೃತಿಯಲ್ಲಿನಿಸರ್ಗದಲ್ಲಿಕಂಡುಬರುವ ಪ್ರಾಣಿ, ಪಕ್ಷಿಗಳನ್ನೇ ವಸ್ತು ವಿಷಯಗಳಾಗಿವೆ. ಇವುಗಳನ್ನೆ ತಮ್ಮ ಕೃತಿಗಳಲ್ಲಿ ವಿಶಿಷ್ಟವಾದ ಶೈಲಿಯಿಂದ ನಿರೂಪಿಸುತ್ತಾರೆ. ಮಹಿಳೆ, ವನ್ಯಜೀವಿ, ಜಲ-ಚರಗಳು, ಪಕ್ಷಿಗಳು ಸಂಯೋಜನೆಯ ಜೊತೆಗೆ ಗಾಢವಾದ ವರ್ಣಗಳು ಕಂಡುಬರುತ್ತವೆ. ಈ ಎಲ್ಲಾ ಅಂಶಗಳ ಜೊತೆಗೆ ತನ್ನತನವನ್ನು ಬೇರಸಿಕೊಂಡು ಸ-ಹೃದಯಿಗಳಿಗೆ ವಿಭಿನ್ನ ನೋಟವನ್ನು ಈ ಕಲಾಕೃತಿಗಳು ನೀಡುವ ಕಾರಣಕ್ಕೆ ಸಧ್ಯ ಆಯ್ಕೆಯಾದ ಕೃತಿಯು ಈ ಎಲ್ಲಾ ಅಂಶಗಳಿಂದ ಉತ್ಕೃಷ್ಟವಾದ ನೋಟವನ್ನು ಆಯ್ಕೆಗಾರರ ಮನವನ್ನು ಮುಟ್ಟಿದೆ. ಇವರ ಈ ಸಾಧನೆಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ,

ಕುಲಸಚಿವ ಡಾ ವಿಜಯ್ ಪೂಣಚ್ಚ ತಂಬಂಡ, ಹಾಗೂ ಬಾದಾಮಿ ಕೇಂದ್ರದ ಮುಖ್ಯಸ್ಥರು, ಅಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಈ ಯುವ ಕಲಾವಿದನ ಕೃತಿಯು ಆಯ್ಕೆಗೊಂಡಿದಕ್ಕೆ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# ಪಹಣಿಗೆ ಆಧಾರ್ ಕಾರ್ಡ್ ಲಿಂಕ್ ಮಾಡಲು ಮನವಿ

**ವಿಜಯಪುರ :** ಸರ್ಕಾರಿ ಸೌಲಭ್ಯಗಳು, ಬ್ಯಾಂಕ್ ಸೌಲಭ್ಯಗಳು, ಕೃಷಿ ಇಲಾಖೆ ಸೌಲಭ್ಯಗಳು ಮತ್ತು ಬೆಳೆ ಪರಿಹಾರಗಳನ್ನು ಪಡೆಯಲು ಜಮೀನಿನ ಪಹಣಿ ಪತ್ರಕ್ಕೆ ಆಧಾರ ಕಾರ್ಡ ಲಿಂಕ್ ಮಾಡಿಸುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಹಣಿ ಪತ್ರಕ್ಕೆ ಆಧಾರ್ ಜೋಡಣೆ ಮಾಡಲು ಅನುಕೂಲವಾಗುವಂತೆ ಹೊಸದಾದ ತಂತ್ರಾಂಶವನ್ನು ಸಿದ್ಧಗೊಳಿಸಿದ್ದು, ಈ ಕಾರ್ಯವನ್ನು ಮಾಡಲು ಗ್ರಾಮ ಆಡಳಿತ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿರುತ್ತದೆ.

ಸರಕಾರದ ವಿವಿಧ ಪ್ರಯೋಜನಗಳನ್ನು ಪಡೆಯಲು ಶಾಶ್ವತ ಪರಿಹಾರದ ಅಂಗವಾಗಿ ಜಮೀನಿನ ಪಹಣಿ ಪತ್ರಕ್ಕೆ ಆಧಾರ ಕಾರ್ಡ್ ಲಿಂಕ್ ಮಾಡಿಸಿಕೊಳ್ಳಲು ಗ್ರಾಮ್ ಒನ್ ಕೇಂದ್ರ,

ಗ್ರಾಮ ಆಡಳಿತ ಕಚೇರಿ, ಅತವಾ ಅಥವಾ ಆಧಾರ್ ಕಾರ್ಡ್ ಲಿಂಕ್ ಮಾಡಲು ಆಡಳಿತ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿದಾಗ ಅವರಿಗೆ ಅಗತ್ಯ ದಾಖಲೆಗಳನ್ನು ನೀಡಿ ಸಹಕರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿದ್ದು ಕೊಣ್ಣೂರ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಲು ಒತ್ತಾಯ



**ಮಹಾಲಿಂಗಪುರ :** ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಸಿದ್ದು ಕೊಣ್ಣೂರ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಿ ತೇರದಾಳ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಒತ್ತು ನೀಡಬೇಕೆಂದು ಸ್ಥಳೀಯ ಪುರಸಭೆಯ ಸ್ಥಾಯಿ ಸಮಿತಿ ಚೇರಮನ್‌ರು, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷರಾದ ಬಲವಂತಗೌಡ ಪಾಟೀಲ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ ಮತ್ತುಸಿಎಂಸಿದ್ದರಾಮಯ್ಯನವರಿಗೆಒತ್ತಾಯಿಸಿದರು.

ಗುರುವಾರ ಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಸೋತಿರುವ ಕಾರಣ ಹಾಗೂ ಮುಂಬರುವ ತಾಪಂ, ಜಿಪಂ ಚುನಾವಣೆಗಳ ದೃಷ್ಟಿಯಿಂದ ಮತಕ್ಷೇತ್ರದಲ್ಲಿ ಪಕ್ಷದ ಸಂಘಟನೆಯ ಸಲುವಾಗಿ ಸಿದ್ದು ಕೊಣ್ಣೂರ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕೆಂದು ಕಾಂಗ್ರೆಸ್ ಪಕ್ಷದರಾಜ್ಯಮುಖಂಡರಿಗೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷರಾದ ಮಲ್ಲಪ್ಪಸಿಂಗಾಡಿ,ಲಕ್ಷ್ಮಣದೇಸಾರಟ್ಟಿ, ಮುಖಂಡರಾದ ರಾಜೇಂದ್ರ ಭದ್ರನ್ನವರ, ಅಶೋಕ ಆಲಗೊಂಡ, ಈಶ್ವರ ಚಮಕೇರಿ, ಯಲ್ಲನಗೌಡ ಪಾಟೀಲ, ಬಸವರಾಜ ರಾಯರ, ಮುಸ್ತಾಕ ಚಿಕ್ಕೋಡಿ, ಸುನೀಲಗೌಡ ಪಾಟೀಲ, ಅರ್ಜುನ ದೊಡಮನಿ, ಮಹಾಲಿಂಗ ಮಾಳಿ, ಲಕ್ಷ್ಮಣ ಮಾಂಗ, ನಜೀರ ಜಾರೆ, ಅಶೋಕ ಅಂಗಡಿ, ಆನಂದ ಬಂಡಿ, ಮಂಜು ಬಕರೆ, ಶಿವು ಕಡಬಲ್ಲವರ, ಲಕ್ಕಪ್ಪ ಭಜಂತ್ರಿ, ಚನ್ನು ದೇಸಾಯಿ, ದುಂಡಪ್ಪ ಜಾಧವ, ಭೀಮಶಿ ಸಸಾಲಟ್ಟಿ, ಬಸವರಾಜ ಮರನೂರ, ಪಿಯೂಸ್ ಓಸ್ವಾಲ್, ಮಹಾದೇವ ಮೇಟಿ, ದುಂಡಪ್ಪ ಪಟ್ಟಣಶೆಟ್ಟಿ, ಎಸ್.ಎಂ.ಪಾಟೀಲ, ರಾಜು ಬಾರಕೋಲ, ಅಶೋಕ ಹುದ್ದಾರ ಸೇರಿದಂತೆ ಹಲವರು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣುರ ಅವರನ್ನುವಿಧಾನಪರಿಷತ್‌ಗೆಆಯ್ಕೆಮಾಡಬೇಕೆಂದು ಒತ್ತಾಯಿಸಿದರು.

# ದಾನ ಮಾಡುವ ಮನೋಭಾವ ಬೆಳೆಯಲಿ




**ಬನಹಟ್ಟಿ :** ಮನುಷ್ಯನಿಗೆ ದಾನ ಮಾಡುವ ಒಳ್ಳೆಯ ಮನಸ್ಸಿರಬೇಕು. ಬೇಡುವದಕ್ಕಿಂತ ಕೊಡುವ ಕೈ-ಮನಸ್ಸು ಶ್ರೇಷ್ಠವಾದುದು ಎಂದು ರಬಕವಿ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.

ಬನಹಟ್ಟಿಯ ದೇಸಾಯಿ ಸ್ವೀಟ್ಸ್ ಫ್ಯಾಕ್ಟರಿಯಲ್ಲಿ ನಡೆದ ಅಭಿನಂದನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಗಳಿಸಿದ ಸಂಪತ್ತು ಸತ್ಕಾರ್ಯ ಮತ್ತು ಧರ್ಮ ಕಾರ್ಯಗಳಿಗೆ ಸದ್ವಿನಿಯೋಗವಾಗಬೇಕು. ಹಂಚಿಕೊಂಡು ಬದುಕುವುದರಲ್ಲಿ ಸುಖ, ಸಂತೋಷ, ನೆಮ್ಮದಿಯಿದೆ. ಮನಸ್ಸು ಸಿರಿವಂತವಾದರೆ ಬದುಕು ಸಿರಿವಂತವಾಗುತ್ತದೆ ಎಂದರು.

ಬನಹಟ್ಟಿಯ ಹಿರೇಮಠದ ಶರಣ ಬಸವ ಶಿವಾಚಾರ್ಯರು ಮಾತನಾಡಿ, ಸೇವೆ ಮಾಡುವುದರಲ್ಲಿ ಸ್ವರ್ಗವಿದೆ. ಗುರುವಿನ ಸೇವೆಗಾಗಿ ತನು, ಮನ ಹಾಗು ಧನ ಸಹಾಯ ಮಾಡಬೇಕು. ಧರ್ಮ ಕಾರ್ಯಗಳು ಪವಿತ್ರ ಕಾರ್ಯಗಳೆಂದರು.

ಜುಂಝುರವಾಡದ ಬಸವರಾಜೇಂದ್ರ ಶ್ರೀಗಳು ಮಾತನಾಡಿ, ಗುರುಗಳಿಗೆ ಹಾಗು ಧರ್ಮ ಕಾರ್ಯಕ್ಕೆ ಗೌರವ ನೀಡಬೇಕು. ದಾನದ ಮೂಲಕ ಧರ್ಮದ ಕಾರ್ಯ ನಡೆದಾಗ ಮಾತ್ರ ಸಮಾಜಕ್ಕೆ ಒಳ್ಳೆಯ ಸಂದೇಶದೊಂದಿಗೆ ಬದುಕು ನೆಮ್ಮದಿ ಕಾಣಲು ಸಾಧ್ಯವೆಂದರು.

ಪ್ರಕಾಶ ದೇಸಾಯಿ ಅಧ್ಯಕ್ಷತೆ ವಹಿಸಿದ್ದರು. ಮಲ್ಲಿಕಾರ್ಜುನ ಬಾಣಕಾರ, ಸುರೇಶ ಚಿಂಡಕ, ದೇವಲಸಕಾ9ರ ದೇಸಾಯಿ, ಶಂಕರ ಸಂಕಣ್ಣವರ, ಶಿವಯೋಗಿ ಕೊಳಕಿ, ಗೋಪಾಲ ಲಡ್ಡಾ, ಗಣಪತರಾವ್ ಹಜಾರೆ, ಪ್ರಭು ಉಮದಿ, ನೇಮಣ್ಣ ಸಾವಂತನವರ, ಸರಸ್ವತಿ ದೇಸಾಯಿ, ಅಮೃತಾ ದೇಸಾಯಿ, ಶ್ರೀಶೈಲ ಕೊಳಕಿ, ಧರೆಪ್ಪ ಉಳ್ಳಾಗಡ್ಡಿ, ಶಂಕರ ಸಂಕಣ್ಣವರ, ಮಹಾವೀರಕೊತ್ತಲಗಿ,ವೆಂಕಟೇಶ ನಾಯಕವಾಡಿ, ಮಹಾವೀರ ಭಿಲವಡಿ, ಚಂದ್ರಕಾಂತ ಕಾಸಾರ, ಶ್ರೀಮಂತ ಕಾನಗೊಂಡ, ಮಲ್ಲು ಹಿಟ್ಟಣಗಿ, ಪ್ರಸನ್ನ ದೇಸಾಯಿ, ಭರತೇಶ ಯಲ್ಲಟ್ಟಿ, ಸಿದ್ದಪ್ಪ ಅಸ್ಕಿ, ಸಂಗಮೇಶ ಗುಟ್ಲಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಲಕ್ಕವ್ವ ದೇವಿಯ ಭಂಡಾರ ಜಾತ್ರೆ ಆರಂಭ





**ರಬಕವಿ-ಬನಹಟ್ಟಿ :** ಸಮೀಪದ ಆಸಂಗಿ ಗ್ರಾಮದ ಲಕ್ಕವ್ವ ದೇವಿಗೆ ಉಡಿ ತುಂಬುವ ಮತ್ತು ಲಕ್ಕವ್ವ ದೇವಿಯ ಜಾತ್ರೆಯು ಗುರುವಾರದಿಂದ ಆರಂಭಗೊಂಡಿತು.

ಗುರುವಾರ, ಶುಕ್ರವಾರ ಮತ್ತು ಶನಿವಾರ ನೀರೋಕುಳಿ ನಡೆಯಲಿದೆ. ಕೊನೆಯ ದಿನದಂದು ಹಾಲೋಕಳಿ ನಡೆಯಲಿದೆ.

ಶುಕ್ರವಾರ ಮಧ್ಯರಾತ್ರಿಯಿಂದಲೇ ಗ್ರಾಮಸ್ಥರು ಲಕ್ಕವ್ವ ದೇವಿಗೆ ದೀರ್ಘದಂಡ ನಮಸ್ಕಾರ ಹಾಕಿ ಹರಕೆಯನ್ನು ಪೂರೈಸಲಿದ್ದಾರೆ. ಶುಕ್ರವಾರ ಬೆಳಿಗ್ಗೆ ಮಹಾ ಅಭಿಷೇಕ ನಡೆಯಲಿದೆ. ನಂತರ ಸಾರ್ವಜನಿಕರು ದೇವಿಗೆ ಉಡಿ ತುಂಬವ ಕಾರ್ಯವನ್ನು ನಡೆಸಲಿದ್ದಾರೆ. ಸಂಜೆ ಗ್ರಾಮದ ಪ್ರಮುಖರು ಸೇರಿ ಉಡಿ ತುಂಬುವ ಕಾರ್ಯ ನಡೆಸಿಕೊಡಲಿದ್ದಾರೆ.

ಶನಿವಾರ ಸಂಜೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನೂರಾರು ಸ್ತಬ್ಧ ಚಿತ್ರಗಳ ಮೆರವಣಿಗೆ ನಡೆಯಲಿದೆ.

ಜಾತ್ರೆಯ ಅಂಗವಾಗಿ ನಾಲ್ಕು ದಿನಗಳ ಕಾಲ ಬೆಳಿಗ್ಗೆ ಹತ್ತರಿಂದ ರಾತ್ರಿ ಒಂಭತ್ತರವರೆಗೆ ಪ್ರಸಾದ ಸೇವೆಯನ್ನು ಕೂಡಾ ಮಾಡಲಾಗಿದೆ ಎಂದು ಸಂಘಟಕರು ತಿಳಿಸಿದರು.

ಹರ್ಷವರ್ಧನ ಪಟವರ್ಧನ, ಧೊಂಡಿಬಾ ಗಾಯಕವಾಡ, ಯಮನಪ್ಪ ಪದ್ದಿ , ಬಸಪ್ಪ ಖೇಮಣ್ಣವರ, ತವನಪ್ಪ ಕೋರಿ, ರಾಜು ಪಾಟೀಲ, ಪಾಂಡುರಂಗ ಸಾಲ್ಗುಡೆ, ಮಲ್ಲಪ್ಪ ಸವದತ್ತಿ , ದುಂಡಪ್ಪ ಸಾಲ್ಗುಡೆ, ಲಾಲಸಾಬ್ ಮೊಮಿನ್, ಬಾಳಪ್ಪ ಗಾಯಕವಾಡ, ಪಾಂಡುರಂಗ ಶಿರೋಳ ಮತ್ತು ಅಶೋಕ ಗಾಯಕವಾಡ ಭಾಗವಹಿಸಿದ್ದರು.

# ಗ್ರಂಥಾಲಯಕ್ಕೆ ನಿವೇಶನ ಕೊಡಿರಿ



**ರಬಕವಿ-ಬನಹಟ್ಟಿ :** ಸ್ಥಳೀಯ ಸಾರ್ವಜನಿಕ ಗ್ರಂಥಾಲಯವು ನಗರಸಭೆಯ ವಾಣಿಜ್ಯ ಮಳಿಗೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು , ಓದುಗರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಅದೇ ರೀತಿಯಾಗಿ ಗ್ರಂಥಗಳ ನಿರ್ವಹಣೆಗೆ ಕೂಡಾ ಸಮಸ್ಯೆಯಾಗುತ್ತಿದೆ. ಆದ್ದರಿಂದ ಸ್ಥಳೀಯ ನಗರಸಭೆಯ ಅಧಿಕಾರಿಗಳು ಗ್ರಂಥಾಲಯಕ್ಕೆ ಸೂಕ್ತವಾದ ನಿವೇಶನವನ್ನು ಆದಷ್ಟು ಬೇಗನೆ ನೀಡಬೇಕು ಎಂದು ಜಿಲ್ಲಾ ಸಾರ್ವಜನಿಕ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಪಾಲಕಿ ಹಾಜೀರಾ ನಸ್ರೀನ್ ಮನವಿ ಮಾಡಿದರು.

ಗುರುವಾರ ಇಲ್ಲಿನ ಕಾಡಸಿದ್ಧೇಶ್ವರ ರಸ್ತೆಯ ವಾಣಿಜ್ಯ ಮಳಿಗೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಲಯಕ್ಕೆ ನೂತನ ಪೀಠೋಪರಣಗಳನ್ನು ನೀಡಿ ಅವರು ಮಾತನಾಡಿದರು.

ಸ್ಥಳೀಯ ನಗರಸಭೆಯ ಪೌರಾಯುಕ್ತರಿಗೆ ಈಗಾಗಲೇ ಸಾಕಷ್ಟು ಬಾರಿ ಮನವಿಯನ್ನು ಮಾಡಿಕೊಳ್ಳಲಾಗಿದೆ. ನಿವೇಶನ ನೀಡಿದರೆ ಮುಂದಿನ ದಿನಗಳಲ್ಲಿ ಉತ್ತಮವಾದ ಗ್ರಂಥಾಲಯವನ್ನು ನಿರ್ಮಾಣ ಮಾಡಿ ಓದುಗರಿಗೆ ಅನುಕೂಲ ಮಾಡಿಕೊಡಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಕೇಂದ್ರ ಗ್ರಂಥಾಲಯದ ಸಿಬ್ಬಂದಿಯವರಾದ ಸಿ. ಎಸ್. ಪ್ಯಾಟಿ, ರಾಮಚಂದ್ರಜಿ ಎಸ್. ವಿ. , ಸ್ಥಳೀಯ ಗ್ರಂಥಪಾಲಕ ಎಂ. ಡಿ. ಭಜಂತ್ರಿ ಮತ್ತು ಸತೀಶ ಬಡಿಗೇರ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

# ಪ್ರಲ್ಹಾದ ಸುತಾರ ನಿಧನ



**ಮುಧೋಳ :** ತಾಲೂಕಿನ ಮುಗಳಖೋಡ ಗ್ರಾಮದ ಖ್ಯಾತ ತಬಲಾವಾದಕರಾಗಿದ್ದ ಪ್ರಲ್ಹಾದ ಬಾಳಪ್ಪ ಸುತಾರ ತಮ್ಮ 70 ನೆಯ ವಯಸ್ಸಿನಲ್ಲಿ ಮೇ 30 ರಂದು ನಿಧನರಾದರು. ಅವರು ತಮ್ಮ ಹಿಂದೆ ಪತ್ನಿ, ನಾಲ್ಕು ಜನ ಸುಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಕುಟುಂಬಕ್ಕಾದ ದುಃಖದಲ್ಲಿ ಸಿದ್ಧಾರೂಢ ಭಾರತಿ ಆಶ್ರಮದ ಸದ್ಭಕ್ತ ಮಂಡಳಿ ಹಾಗೂ ಕಲಾವಿದರ ಬಳಗವು ಭಾಗಿಯಾಗಿದ್ದಾರೆ.

# ಗಂಗಾವತಿ ಎಪಿಎಂಸಿ ಕುರಿತ ಪತ್ರಿಕಾ ವರದಿಗೆ ಸ್ಪಷ್ಟೀಕರಣ

**ಕೊಪ್ಪಳ :** ಗಂಗಾವತಿಯ ತರಕಾರಿ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳಿಂದ ತರಕಾರಿ ಬೆಲೆ ನಿಗದಿ ಎಂಬ ಶೀರ್ಷಿಕೆಯಡಿ ಪತ್ರಿಕೆಯೊಂದರಲ್ಲಿ ಪ್ರಕಟವಾದ ವರದಿಗೆ ಸಂಬಂಧಿಸಿದಂತೆ ಗಂಗಾವತಿ ಎಪಿಎಂಸಿ ಕಾರ್ಯದರ್ಶಿಗಳು ಸ್ಪಷ್ಟೀಕರಣ ನೀಡಿದ್ದಾರೆ.

ಎಪಿಎಂಸಿ ಇಂದ ಲೈಸೆನ್ಸ್ ಪಡೆದ ತರಕಾರಿ ವ್ಯಾಪಾರಸ್ಥರಿಗೆ ಲೈಸೆನ್ಸ್ ನಿಯಮಾವಳಿ ಪ್ರಕಾರ ರೈತರಿಂದ ಯಾವುದೇ ಕಮಿಷನ್ ಪಡೆಯದೇ ವ್ಯಾಪಾರ ವಹಿವಾಟು ಮಾಡುವಂತೆ, ಒಂದು ವೇಳೆ ರೈತರಿಂದ ಕಮಿಷನ್ ಪಡೆಯುತ್ತಿರುವುದಾಗಿ ಸಮಿತಿಗೆ ಲಿಖಿತ ದೂರು ಸ್ವೀಕೃತವಾದಲ್ಲಿ ತನಿಖೆ ಮಾಡಿ

ಅಂತಹ ಲೈಸೆನ್ಸ್ ಪಡೆದ ಪೇಟೆ ಕಾರ್ಯಕರ್ತರ ಲೈಸೆನ್ಸ್ ಅನ್ನು ರದ್ದುಗೊಳಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು

ಎಂದು ತಿಳುವಳಿಕೆ ಪತ್ರದ ಮೂಲಕ ತಿಳಿಸಲಾಗಿದೆ ಎಂದು ಕಾರ್ಯದರ್ಶಿಗಳು ಸ್ಪಷ್ಟೀಕರಣದಲ್ಲಿ ತಿಳಿಸಿದ್ದಾರೆ.

# ವಿಶ್ವ ಸ್ಕಿಜೋಫ್ರೇನಿಯಾ ದಿನಾಚರಣೆ

**ಬೆಳಗಾವಿ :** ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, -ಬೆಳಗಾವಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ತಾಲೂಕಾ ಆರೋಗ್ಯ ಅಧಿಕಾರಿಗಳ ಕಚೇರಿ ಬೆಳಗಾವಿ ಇವರಗಳ ಸಂಯುಕ್ತ ಆಶ್ರಾಯದಲ್ಲಿ ಮೇ. 24 ರಂದು ಜರುಗಿದ ವಿಶ್ವ ಸ್ಕಿಜೋಫ್ರೇನಿಯಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳಾದ ಡಾ॥ ಗೀತಾ ಪಿ ಕಾಂಬಳೆ ಅವರು ಉದ್ಘಾಟಿಸಿದರು.

ಸ್ಕಿಜೋಫ್ರೇನಿಯಾ ಕಾಯಿಲೆಗೆ ತಜ್ಞ ವೈದ್ಯರು ಸೂಕ್ತ ಮಾಹಿತಿ ಮತ್ತು ಚಿಕಿತ್ಸೆಯನ್ನು ನೀಡುವರು 2017ರಲ್ಲಿ ಮಾನಸಿಕ ಹೆಲ್ತ್-ಕೇರ್ ಆಕ್ಟ್ ಜಾರಿಗೆ ತರಲಾಯಿತು. ಈ ಕಾನೂನಿನ ಅನ್ವಯ ಮಾನಸಿಕ ಅಸ್ಥವ್ಯಸ್ಥ ವ್ಯಕ್ತಿಗೆ ಸೂಕ್ತ ಚಿಕಿತ್ಸೆ ನೀಡಬೇಕು, ಅವರಿಗೆ ಹೊಡೆಯುವುದು, ಬಡೆಯುವುದು ಹಾಗೂ ಕಬ್ಬಿಣ ಶಲಾಖೆಯಿಂದ ಬಂಧಿಸುವಂತಿಲ್ಲಾ ಎಂದರು. ಸಮಾಜದ ದಯಾಳುತನದ ಶಕ್ತಿಯ ಆಚರಣೆ ಅನುಗುಣವಾಗಿ ಮಾನಸಿಕ ಅಸ್ಥವ್ಯಸ್ಥರ ಮೇಲೆ ಪಾಲಕರು ಹೆಚ್ಚಿನ ಸಮಯವನ್ನು ನೀಡಿ ಅವರ ಭಾವನೆಗಳಿಗೆ ಮಹತ್ವವನ್ನು ನೀಡಲು ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳಾದ ಡಾ॥ ಗೀತಾ ಪಿ ಕಾಂಬಳೆ ಅವರು ಕರೇ ನೀಡಿದರು.

ಕಾರ್ಯಕ್ರ,ದ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಮನೋ ವೈದ್ಯರಾದ ಡಾ॥ ಉತ್ತಮ ಶೇಲಾರ, ಡಾ॥ ಮುಸ್ಕಾನ್ ಮತ್ತು ಡಾ॥ ಸುಮತಿ ಇವರುಗಳು ಮಾತನಾಡಿ ಸಾಮಾನ್ಯವಾಗಿ ಎಲ್ಲರಲ್ಲೂ ಮಾನಸಿಕ ಲಕ್ಷಣಗಳು ಕಾಣಲಿದ್ದು ಇವುಗಳ ಪ್ರಮಾಣ ಹೆಚ್ಚು ಮತ್ತು ಕಡಿಮೆ ಇರುತ್ತವೆ ಸ್ಕಿಜೋಫ್ರೇನಿಯಾದಿಂದ ಬಳಲುತ್ತಿದ್ದು ಸಮುದಾಯದಲ್ಲಿ ಇದರ ಜೀವಾತಾವಧಿಯ ಪ್ರಮಾಣ ಅಂದಾಜು 0.3% ರಿಂದ 0.7%ರಷ್ಟು ಎಂದು ಆರೋಗ್ಯ ಸಂಸ್ಥೆಯ ಅಧ್ಯಾಯನದಲ್ಲಿ ಕಂಡು ಬಂದಿದೆ ಹೇಳಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ಸ್ಥಾನವಹಿಸಿಕೊಂಡ ತಾಲೂಕಾ ಆರೋಗ್ಯ ಅಧಿಕಾರಿಗಳಾದ ಡಾ॥ ಸಂಜಯ ಡುಮ್ಮಗೋಳ ಅವರು ಮಾತನಾಡಿ ಸ್ಕಿಜೋಫ್ರೇನಿಯಾ ಕಾಯಿಲೆಯು ಸಾಮಾನ್ಯವಾಗಿ 15 ರಿಂದ 25 ವರ್ಷದೊಳಗಿನ ವಯಸ್ಸಿನಲ್ಲಿ ಕಾಣಿಸಿಕೊಳ್ಳುತ್ತದೆ ಈ ಕಾಯಿಲೆ ಕುರಿತು ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿ ಮೇ.24ರಿಂದ 30 ರವರೆಗೆ ಅರಿವು ಸಪ್ತಾಹ ಕಾರ್ಯಕ್ರಮ ಮತ್ತು ಚಿಕಿತ್ಸೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮನೋವೈದ್ಯರಾದ ಡಾ॥ ಅಬ್ರಾರ್ ಪುಣೇಕರ ಮತ್ತು ಡಾ॥ ಸುನೀಲ ಜಾಬಗೌಡರ ಇವರುಗಳು ಮಾತನಾಡಿ ವಿನಾಕಾರಣ ನಗುವುದು, ಅಳುವುದು, ಕಾಲ್ಪನಿಕ ಧ್ವನಿ ಕೇಳಿಸುವುದು, ಒಬ್ಬರೆ ಮಾತನಾಡಿಕೊಳ್ಳುವುದು, ಕಾರಣವಿಲ್ಲದೆ ಅನುಮಾನ ಪಡುವುದು, ಅಸಹಜ ಮತ್ತು ವಿಚಿತ್ರ ಅನುಭವಗಳ ವರ್ತನೆ, ಹೆಚ್ಚು ಹೆಚ್ಚು ಮಾದಕ ವಸ್ತುಗಳ ಸೇವನೆ ಮಾಡುವುದು, ಮಂಕಾಗಿರುವುದು ಯಾರೊಡನೆ ಮಾತನಾಡದೆ ಇರುವುದು, ದಿನಚರಿಯಲ್ಲಿ ನಿರಾಶಕ್ತಿ, ಆತ್ಮಹತ್ಯೆ ಆಲೋಚನೆಗಳು ಹಾಗೂ ಕೆಲಸದಲ್ಲಿ ನಿರಾಶಕ್ತಿ ಇವು ಸ್ಕಿಜೋಫ್ರೇನಿಯಾ ಕಾಯಿಲೆಯ ಧನಾತ್ಮಕ ಮತ್ತು ಋಣಾತ್ಮಕ ಲಕ್ಷಣಗಳಾಗಿರುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳ ಸಹಾಯಕರಾದ ಮಂಜುಳಾ ಜಿಮ್ಮನ್ನವರ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳ ಸಹಾಯಕರಾದ ಭರತ ಹೆಚ್.ಬಿ ಹಾಗೂ ಸಿಬ್ಬಂದಿಗಳು ಮತ್ತು ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಐಸಿಎಂಆರ್-ಎನ್.ಐ.ಟಿ.ಎಂ. ಸಂಸ್ಥಾಪನಾ ದಿನಾಚರಣೆ

## ಪಾರಂಪರಿಕ ಔಷಧ ಪದ್ಧತಿ-ಹೆಚ್ಚಿನ ಸಂಶೋಧನೆಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ ಕರೆ




**ಬೆಳಗಾವಿ :** ಪಾರಂಪರಿಕ ಔಷಧೀಯ ಸಂಶೋಧನಾ ಕ್ಷೇತ್ರದಲ್ಲಿ ಇಡೀ ಜಗತ್ತು ಭಾರತದ ಕಡೆ ನೋಡುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ದೇಶವನ್ನು ಮುಂಚೂಣಿಗೆ ಕರೆದೊಯ್ಯುವ ಹೊಣೆಗಾರಿಕೆ ವಿಜ್ಞಾನಿಗಳು/ಸಂಶೋಧಕರ ಮೇಲಿದೆ. ಜೀವವೈವಿಧ್ಯವನ್ನು ಕಾಪಾಡುವ ಮೂಲಕ ಪಾರಂಪರಿಕ ಔಷಧೀಯ ಪದ್ಧತಿಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಬೇಕು ಎಂದು ಘನತೆವೆತ್ತ ಉಪ ರಾಷ್ಟ್ರಪತಿಯವರಾದ ಜಗದೀಪ್ ಧನಕರ ಅವರು ಕರೆ ನೀಡಿದರು.

ನಗರದಲ್ಲಿ ಸೋಮವಾರ (ಮೇ 27) ನಡೆದ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ ರಾಷ್ಟ್ರೀಯ ಪಾರಂಪರಿಕ ಚಿಕಿತ್ಸಾ ವಿಧಾನ ಸಂಸ್ಥೆಯ 18 ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೋವಿಡ್ ಸಂದರ್ಭದಲ್ಲಿ ಪ್ರತಿಯೊಬ್ಬರು ಪರಸ್ಪರ ಸಹಕರಿಸುವ ಮೂಲಕ ಸಂದಿಗ್ಧ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಇದು ಭಾರತೀಯ ಸಂಸ್ಕೃತಿಯಾಗಿದೆ ಎಂದರು.

ವಿಕಸಿತ ಭಾರತ-ಕನಸು ಸಾಕಾರಕ್ಕೆ ಕೈಜೋಡಿಸಿ:

ಕೋವಿಡ್ ಚಿಕಿತ್ಸೆ ಹಾಗೂ ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಐಸಿಎಂಆರ್ ಕಾರ್ಯಅತ್ಯಂತಅಭಿನಂದನೀಯವಾಗಿದೆ. ದೇಶದ ಪ್ರತಿಯೊಬ್ಬ ನಾಗರಿಕನ ಆರೋಗ್ಯದ ಮೇಲೆಯೇ ದೇಶದ ಆರೋಗ್ಯ ಅವಲಂಬಿಸಿದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯ ಸದೃಢರಾಗುವ ಮೂಲಕ 2047 ರ ವೇಳೆಗೆ ವಿಕಸಿತ ಭಾರತ ಕನಸು ಸಾಕಾರಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಘನತೆವೆತ್ತ ಉಪರಾಷ್ಟ್ರಪತಿಯವರಾದ ಜಗದೀಪ್ ಧನಕರ ಅವರು ಕರೆ ನೀಡಿದರು. ಭಾರತದ ಆರ್ಥಿಕತೆಯು ಒಂದು ಕಾಲದಲ್ಲಿ ಲಂಡನ್ ಹಾಗೂ ಪ್ಯಾರಿಸ್ ಗಿಂತ ಕಡಿಮೆ ಇತ್ತು. ಈಗ ಜಗತ್ತಿನ ಐದನೇ ಅತ್ಯಂತ ದೊಡ್ಡ ಆರ್ಥಿಕ ಶಕ್ತಿಯಾಗಿ ದೇಶವು ರೂಪುಗೊಂಡಿದೆ.

ಐಸಿಎಂಆರ್-ಎನ್‌ಐಟಿಎಂ ಕಾರ್ಯ ಶ್ಲಾಘನೀಯ:

ಆಯುರ್ವೇದ, ಯುನಾನಿ, ಸಿದ್ಧ, ಹೋಮಿಯೋಪಥಿ, ಯೋಗ ಒಳಗೊಂಡ ಆಯುಷ್ ಪದ್ಧತಿ ಭಾರತದ ಹೆಗ್ಗಳಿಕೆಯಾಗಿದೆ. ಸಾಂಕ್ರಾಮಿಕ ರೋಗಗಳ ನಿಯಂತ್ರಣದಲ್ಲಿ ಪಾರಂಪರಿಕ ಔಷಧ ಚಿಕಿತ್ಸಾ ವಿಧಾನದ ಪಾತ್ರ ಪ್ರಮುಖವಾಗಿದೆ ಎಂದು ಅಭಿಪ್ರಾಯಪಟ್ಟ ಉಪ ರಾಷ್ಟ್ರಪತಿ ಜಗದೀಪ್ ಧನಕರ ಅವರು, ಈ ನಿಟ್ಟಿನಲ್ಲಿ ಐಸಿಎಂಆರ್-ಎನ್‌ಐಟಿಎಂ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಬೆಳಗಾವಿಯಲ್ಲಿರುವ ಎನ್‌ಐಟಿಎಂ ಸಂಸ್ಥೆಯ 18 ನೇ ಸಂಸ್ಥಾಪನಾ ದಿನವು ಅತ್ಯಂತ ಸ್ಮರಣೀಯವಾಗಿದೆ. ಹದಿನೆಂಟರ ಪ್ರಾಯವು ವ್ಯಕ್ತಿಜೀವನದಲ್ಲಿ ಮಹತ್ತರ ಘಟ್ಟವಾಗಿದೆ. ಅದೇ ರೀತಿಯಲ್ಲಿ ಸಂಸ್ಥೆಯ ಸಾಧನೆಗೂ ಕೂಡ ಸಕಾಲವಾಗಿದೆ. ಇಂತಹ ಸುಸಂದರ್ಭದಲ್ಲಿ ಎನ್‌ಐಟಿಎಂ ಸಂಸ್ಥೆಯ ಸಂಸ್ಥಾಪನಾ ಸಮಾರಂಭದಲ್ಲಿ ಭಾಗವಹಿಸಿರುವುದು ಸುದೈವ ಎಂದು ಉಪ ರಾಷ್ಟ್ರಪತಿಯವರು ಸಂತಸ ವ್ಯಕ್ತಪಡಿಸಿದರು.

ಪಾರಂಪರಿಕ ಔಷಧ-ಸಂಶೋಧನೆ ಸವಾಲು:

ಡಯಾಬಿಟಿಸ್ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಪಾರಂಪರಿಕ ಔಷಧಕಂಡುಹಿಡಿಯುವುದುಸವಾಲಾಗಿದೆ. ವಿಜ್ಞಾನಿಗಳು ಸಂಶೋಧನಾ ಕ್ಷೇತ್ರವನ್ನು ವಿಸ್ತರಿಸುವ ಮೂಲಕ ಮಾನವ ಸಂಕುಲದ ಹಿತರಕ್ಷಿಸಬೇಕು ಎಂದು ಕರೆ ನೀಡಿದರು. ದೇಶದ ಆಯುಷ್ ಇಲಾಖೆಯು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಔಷಧೀಯ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಯಲ್ಲಿ ಶ್ರಮಿಸುತ್ತಿದೆ. ಸಂಶೋಧನೆ ಹಾಗೂ ಅಭಿವೃದ್ಧಿ ಕೆಲಸಕ್ಕೆ ಪ್ರತಿಯೊಬ್ಬರು ಸಹಕರಿಸಬೇಕು. ವೈದ್ಯಕೀಯ ಕ್ಷೇತ್ರದಲ್ಲಿನ ಸಂಶೋಧನೆಯು ದೇಶದ ಆರ್ಥಿಕ ಅಭಿವೃದ್ಧಿಗೂ ಅನುಕೂಲವಾಗಲಿದೆ. ಹೊಸ ಬಗೆಯ ಕಾಯಿಲೆಗಳು ಕಂಡುಬರುತ್ತಿವೆ. ಈ ಬಗ್ಗೆ ಜಾಗೃತಿ ವಹಿಸಬೇಕಿದೆ. ಸಂವಹನವು ಸಮಾಜವನ್ನು ಆರೋಗ್ಯಯುತವಾಗಿರಿಸಲು ಉತ್ತಮ ಸಾಧನವಾಗಿದ್ದು. ಇದನ್ನು ಬಳಸಿಕೊಳ್ಳಬೇಕುಎಂದುಸಲಹೆನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಭಾರತ ಸರಕಾರದ ವೈದ್ಯಕೀಯ ಸಂಶೋಧನಾ ಇಲಾಖೆಯ ಕಾರ್ಯದರ್ಶಿಯೂ ಆಗಿರುವ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಮಹಾನಿರ್ದೇಶಕರಾದ ಡಾ.ರಾಜೀವ್‌ಬಹಲ್‌ಅವರು,ಐಸಿಎಂಆರ್‌ನ 27 ಸಂಶೋಧನಾ ಸಂಸ್ಥೆಗಳಲ್ಲಿ ಭಾರತೀಯ ಪಾರಂಪರಿಕ ಚಿಕಿತ್ಸಾ ವಿಧಾನ ಸಂಸ್ಥೆಯು ಒಂದಾಗಿದೆ ಎಂದು ತಿಳಿಸಿದರು. ಕೋವಿಡ್ ಲಸಿಕೆ ಅಭಿವೃದ್ಧಿಪಡಿಸುವಲ್ಲಿ ಐಸಿಎಂ ಆರ್ ಪಾತ್ರ ಪ್ರಮುಖವಾಗಿದೆ. ಪಾರಂಪರಿಕ ಔಷಧ ವಿಜ್ಞಾನ ಸಂಸ್ಥೆಯು ಆಧುನಿಕ ತಂತ್ರಜ್ಞಾನಗಳ ಮೂಲಕ ಪಾರಂಪರಿಕ ಔಷಧೀಯ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುತ್ತಿದೆ. ಪಶ್ಚಿಮ ಘಟ್ಟದಲ್ಲಿರುವಔಷಧೀಯಸಸ್ಯಸಂಕುಲಗಳ ಅಧ್ಯಯನ ನಡೆಸುವ ಮೂಲಕ ಗಿಡಮೂಲಿಕೆ ಔಷಧಿ ತಯಾರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು.

ಘನತೆವೆತ್ತ ಕರ್ನಾಟಕ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಶ್ರೀಮತಿ ಡಾ.ಸುದೇಶ ಧನಕರ, ಬೆಳಗಾವಿಯ ಐಸಿಎಂಆರ್-ಎನ್.ಐ.ಟಿ.ಎಂ. ನಿರ್ದೇಶಕರಾದ ಡಾ.ಸುಬರ್ಣ ರಾಯ್ ಉಪಸ್ಥಿತರಿದ್ದರು.

ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಶ್ರೀಮತಿ ಅನು ನಾಗರ ಅವರು ಸ್ವಾಗತಿಸಿದರು. ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ಪೊಲೀಸ್ ಆಯುಕ್ತರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಐಸಿಎಂಆರ್-ಎನ್‌ಐಟಿಎಂ ವಿಜ್ಞಾನಿಗಳು, ಸಂಶೋಧಕರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ಮತ ಎಣಿಕೆ: ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳ ಆದೇಶ

**ಕೊಪ್ಪಳ :** ಲೋಕಸಭಾ ಚುನಾವಣೆ-2024ರ ಮತ ಎಣಿಕೆ ಕಾರ್ಯ ಜೂನ್ 04ರಂದು ನಡೆಯಲಿರುವ ಪ್ರಯುಕ್ತ ಶಾಂತಿ ಹಾಗೂ ನ್ಯಾಯಸಮ್ಮತವಾಗಿ ನಡೆಯುವ ಹಿತದೃಷ್ಟಿಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144 ರನ್ವಯ ಕೊಪ್ಪಳ ಜಿಲ್ಲೆಯಾದ್ಯಂತ ಜೂನ್ 03ರ ಸಂಜೆ 6 ಗಂಟೆಯಿಂದ ಜೂನ್ 4ರ ಮಧ್ಯರಾತ್ರಿ 12 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ಧ್ವನಿವರ್ಧಕಗಳನ್ನು ಹಾಕುವುದು, ಮೆರವಣಿಗೆ, ಸಭೆ, ಪಟಾಕಿಗಳನ್ನು ಸಿಡಿಸುವುದು ಹಾಗೂ ವಿಜಯೋತ್ಸವ ಆಚರಿಸುವ ಸಾಧ್ಯತೆಗಳಿದ್ದು, ಚುನಾವಣೆಯ ಫಲಿತಾಂಶದಿಂದಾಗಿ ಯಾವುದೇ ಘರ್ಷಣೆಗಳು ಉಂಟಾಗದಂತೆ ಹಾಗೂ ಸಾರ್ವಜನಿಕ ಶಾಂತಿಗೆ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲೆಯಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಆದೇಶದನ್ವಯ ಮತ ಎಣಿಕಾ ಕೇಂದ್ರವಾದ ಕೊಪ್ಪಳ ನಗರದ ಶ್ರೀ ಗವಿಸಿದ್ದೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಆವರಣವು ಸಂಪೂರ್ಣ ನಿರ್ಬಂಧಿತ ಪ್ರದೇಶವಾಗಿರುತ್ತದೆ. ಚುನಾವಣಾ ಕರ್ತವ್ಯದಲ್ಲಿ ನಿರತರಾದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು, ಚುನಾವಣಾ ಅಭ್ಯರ್ಥಿಗಳು, ಎಣಿಕಾ ಏಜೆಂಟರು ಹಾಗೂ ಪಾಸ್ ಹೊಂದಿರುವ ಮಾಧ್ಯಮದವರಿಗೆ ಮಾತ್ರ ಮತ ಎಣಿಕಾ ಕೇಂದ್ರದಲ್ಲಿ ಪ್ರವೇಶಕ್ಕೆ ಅವಕಾಶವಿರುತ್ತದೆ. ಈ ಸಮಯದಲ್ಲಿ ಜಿಲ್ಲೆಯಾದ್ಯಂತ ವಿಜಯೋತ್ಸವ ಆಚರಣೆ, ಧ್ವನಿವರ್ಧಕಗಳನ್ನು ಬಳಸುವುದು, ಮೆರವಣಿಗೆ ಮಾಡುವುದು, ಪಟಾಕಿ ಗಳನ್ನು ಸಿಡಿಸುವುದನ್ನು ನಿರ್ಬಂಧಿಸಲಾಗಿದೆ.

# ಸರ್ಕಾರಿ ಪಾಲಿಟೆಕ್ನಿಕ್ ಕೋರ್ಸುಗಳ ಪ್ರವೇಶ ಆರಂಭ

**ಬೆಳಗಾವಿ :** 2024-25 ನೇ ಸಾಲಿನ ಬೆಳಗಾವಿಯ ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ವಿಶೇಷ ವಿಕಲಚೇತನ ವಿದ್ಯಾರ್ಥಿಗಳಿಗೆ ಮೂರು ವರ್ಷದ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸಿವಿಲ್ ಇಂಜಿನೀಯರಿಂಗ್ (4), ಎಲೇಕ್ಟ್ರಿಕಲ್ ಮತ್ತು ಎಲೇಕ್ಟ್ರಾನಿಕ್ಸ್ (4), ಮೆಕಾನಿಕಲ್ (3), ಆಟೋಮೊಬೈಲ್ (2), ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ ಇಂಜಿನಿಯರಿಂಗ್ (5), ಕಮರ್ಶಿಯಲ್ ಪ್ರಾಕ್ಟಿಸ್ (ಇಂಗ್ಲೀಷ್ 3), ಕಮರ್ಶಿಯಲ್ ಪ್ರಾಕ್ಟಿಸ್ (ಕನ್ನಡ 4) ಒಟ್ಟು 25 ಕೋರ್ಸುಗಳು ಲಭ್ಯವಿರುತ್ತದೆ.

ಆಸಕ್ತರು ಎಸ್,ಎಸ್.ಎಲ್.ಸಿ ಅಂಕ ಪಟ್ಟಿ ಹಾಗೂ ಸಂಬಂದಿಸಿದ ವೈಧ್ಯಾದಿಕಾರಿಗಳಿಂದ ಪಡೆದ ಮೂಲ ವೈದ್ಯಕಿಯ ಪ್ರಮಾಣ ಪತ್ರಗಳ ಹಾಗೂ ಎಸ್,ಎಸ್.ಎಲ್.ಸಿ ಒಳಗೊಂಡಂತೆ 5 ವರ್ಷದ ಅವಧಿಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಶಾಲೆ ಪ್ರಮಾಣ ಪತ್ರಗಳನ್ನು ತರಬೇಕು. ಈ ಕೋರ್ಸುಗಳಿಗೆ ಯಾವುದೇ ಶುಲ್ಕವಿರುವುದಿಲ್ಲ. ಸ್ಕಾಲರಶಿಪ್ ಹಾಗೂ ಲಭ್ಯವಿರುವ ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರು ಅವರ ಕಛೇರಿಗೆ ಭೇಟಿಯಾಗಬಹುದು ಎಂದು ಬೆಳಗಾವಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರು ಪ್ರಕಟನೆಯಲ್ಲಿ ತಿಳಿಸಿದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State